ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಫ್ರಾನ್ಸ್‌ನಲ್ಲಿ ನಡೆದ ಭಾರತ ಇನ್ನೋವೇಟ್ ಕಾರ್ಯಕ್ರಮದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವೆಲ್ ಮ್ಯಾಕ್ರನ್ ಅವರನ್ನು ಅಪ್ಪಿಕೊಂಡ ಕ್ಷಣ...

15 ಜೂನ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 96 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ದೇಶದ ಬಲಿಪೀಠದ ಮುಂದೆ ನಿಂತು ಮಾಡಿಕೊಂಡ ಪವಿತ್ರ ಒಪ್ಪಂದವೇ ಈ ಪ್ರೀತಿ » 2


ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ರಾಹುಲ್‌ಗೆ ಪತ್ರ » 3


ನೀಸ್ ನಗರದಲ್ಲಿ ಪ್ರಧಾನಿ ಮೋದಿಗೆ ಅದ್ದೂರಿ ಸ್ವಾಗತ » 4

# ಗ್ಯಾರಂಟಿ ಯೋಜನೆ ನಿಲ್ಲಿಸುವುದಿಲ್ಲ

## ಪ್ರತಿಪಕ್ಷಗಳ ಆರೋಪ ಅಲ್ಲಗಳೆದ ಡಿ.ಕೆ.ಶಿವಕುಮಾರ್ | ಅನರ್ಹರ ಕೈಬಿಡಲು ಮರು ಅರ್ಜಿ

• ಪ್ರಜೋದಯ ವರದಿ

**ಬೆಂಗಳೂರು:** ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳ ಮರು ಪರಿಷ್ಕರಣೆ ಬಗ್ಗೆ ಯಾರೂ ಗೊಂದಲಕ್ಕೆ ಒಳಗಾಗಬಾರದು. ಯಾವ ಕಾರಣಕ್ಕೂ ಗ್ಯಾರಂಟಿ ನಿಲ್ಲುವುದಿಲ್ಲವೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸ್ಪಷ್ಟಪಡಿಸಿದ್ದಾರೆ.

ಯೋಜನೆಗಳನ್ನು ಸ್ಥಗಿತಗೊಳಿಸುವುದಿಲ್ಲ. ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ಸುಳ್ಳು ಸುದ್ದಿಗೆ ಸಾರ್ವಜನಿಕರು ಕಿವಿಗೊಡಬಾರದು. ಕೆಲವರು ಸತ್ತವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಖಾತೆ ತೆರೆದು ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಹೀಗಾಗಿ ಗ್ಯಾರಂಟಿ ಯೋಜನೆ ಫಲಾನುಭವಿಗಳ ದೃಢೀಕರಣಕ್ಕಾಗಿ ಅವರ ಹೆಸರು, ವಿಳಾಸ, ಖಾತೆ ಸಂಖ್ಯೆ ಖಚಿತಪಡಿಸಿಕೊಳ್ಳಲು ಮತ್ತೆ ಅರ್ಜಿ ಸಲ್ಲಿಸಲು ಹೇಳಲಾಗಿದೆಯೇ ಹೊರತು ಯೋಜನೆಗಳನ್ನು ನಿಲ್ಲಿಸಲು ಅಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

**5 ಸಾವಿರ ಕೋ.ರೂ. ಏನಾಯ್ತು**

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭ್ರಷ್ಟಾಚಾರ ಮುಕ್ತ ರಾಜ್ಯ ಮಾಡುವುದಾಗಿ ಹೇಳಿದ್ದಾರೆ. ಅದಕ್ಕೂ ಮೊದಲು ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿದ 5 ಸಾವಿರ ಕೋ.ರೂ. ಏನಾಯ್ತು ಎಂದು ಹೇಳಿ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹಲಕ್ಷ್ಮೀ, ಗೃಹಜ್ಯೋತಿ ಯೋಜನೆಗಳಿಗೆ ಮರು ಅರ್ಜಿ ಕರೆಯಲಾಗಿದೆ. ಎರಡೂ ಯೋಜನೆಗಳಲ್ಲಿ ಲೋಪದೋಷಗಳಿವೆ ಎಂದು ಸರ್ಕಾರವೇ ಹೇಳಿದೆ. ಮರು ಅರ್ಜಿ ಸ್ವೀಕಾರ ಒಳ್ಳೆಯ ಉದ್ದೇಶವೇ ಇರಬಹುದು. ಅದರ ನೆಪದಲ್ಲಿ ನಿಜವಾದ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದರು.




ಕಚೇರಿಗೆ ಒಳಗೆ ಲಂಚ ತೆಗೆದುಕೊಳ್ಳಬೇಡಿ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಹಾಗಿದ್ದರೆ ಕಚೇರಿ ಒಳಗೆ ದುಡ್ಡು ತೆಗೆದುಕೊಳ್ಳಬೇಡಿ, ಹೊರಗಡೆ ತೆಗೆದುಕೊಳ್ಳಿ ಎಂದು ಅದರ ಅರ್ಥವೇ. ಮುಖ್ಯಮಂತ್ರಿ ಕಚೇರಿಯಿಂದಲೇ ಭ್ರಷ್ಟಾಚಾರ ಮುಕ್ತ ಆಡಳಿತ ಶುರುವಾಗಲಿ. ಅಲ್ಲಿ ಭ್ರಷ್ಟಾಚಾರ ನಡೆದರೆ ಯಾರು ನೋಡುತ್ತಾರೆ, ಅದಕ್ಕೆ ಯಾರು ಜವಾಬ್ದಾರಿ ಎಂದು ಪ್ರಶ್ನಿಸಿದರು.

**ವಿಜಯೇಂದ್ರ, ಗಂಭೀರ ಆರೋಪ**

ಸರ್ಕಾರ ಗ್ಯಾರಂಟಿ ಫಲಾನುಭವಿಗಳನ್ನು ಪರಿಷ್ಕರಣೆಗೆ ಒಳಪಡಿಸುತ್ತಿರುವ ಕ್ರಮವನ್ನು ವಿರೋಧಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಗ್ಯಾರಂಟಿ ಫಲಾನುಭವಿಗಳ ಸಂಖ್ಯೆ ಇಳಿಸುವ ದುಸ್ಸಾಹಸಕ್ಕೆ ಮುಂದಾಗಿದ್ದಾರೆಂದು ಟೀಕಿಸಿದ್ದಾರೆ.

ಗ್ಯಾರಂಟಿಯಿಂದ ಆರ್ಥಿಕ ಸಂಕಷ್ಟ, ಪೆಟ್ಟು ಬಿದ್ದಿದೆ. ಒಂದೊಂದೇ ನೆಪಗಳನ್ನು ಒಡ್ಡಿ ಈಗ ಗ್ಯಾರಂಟಿ

» ನಾಲ್ಕನೇ ಪುಟದಲ್ಲಿ

> ಕೆಲವರು ಮೃತಪಟ್ಟವರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಯೋಜನೆಗಳ ಲಾಭ ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಎಲ್ಲಾ ಗ್ಯಾರಂಟಿ ಯೋಜನೆಗಳು ಶೇಕಡಾ ನೂರಕ್ಕೆ ನೂರರಷ್ಟು ಮುಂದುವರಿಯುತ್ತವೆ. ಯಾರೂ ಆತಂಕಪಡುವ ಅವಶ್ಯಕತೆ ಇಲ್ಲ.
>
> -ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

### ಬೆಂಗಳೂರು ಡ್ರಗ್ ಕೇಂದ್ರ: ಹೆಚ್.ಡಿ.ಕೆ.

ಬೆಂಗಳೂರಿನಲ್ಲಿ ಡ್ರಗ್ಸ್ ದಂಧೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಇದು ಆಶ್ಚರ್ಯಕರ ವಿಷಯ ಅಲ್ಲ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರತಿನಿತ್ಯ ದಂಧೆ ನಡೆಯುತ್ತಿದೆ. ಈ ಹಿಂದಿನ ಮುಖ್ಯಮಂತ್ರಿ (ಸಿದ್ದರಾಮಯ್ಯ) ತವರಲ್ಲೇ ಡ್ರಗ್ ತಯಾರಾಗುವ ವಿಚಾರ ಬೆಳಕಿಗೆ ಬಂದಿತ್ತು. ಬೇರೆ ರಾಜ್ಯ, ದೇಶಗಳಿಂದ ಬಂದು ಬೆಂಗಳೂರನ್ನ ಡ್ರಗ್ಸ್ ಕೇಂದ್ರ ಮಾಡಿಕೊಂಡಿದ್ದಾರೆ. ಅದರಿಂದ ಸಾಕಷ್ಟು ಕುಟುಂಬಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಗೃಹ ಸಚಿವರು ವಿರೋಧ ಪಕ್ಷಗಳನ್ನು ಟೀಕೆ ಮಾಡುವುದಕ್ಕೆ ಕೊಡುವ ಸಮಯವನ್ನು, ಡ್ರಗ್ಸ್ ದಂಧೆ ನಿಯಂತ್ರಿಸಲು ಕೊಡಲಿ ಎಂದು ಟೀಕಿಸಿದರು.

# ಪ್ರವಾಸಕ್ಕೆ ಬಂದಿದ್ದ ಮೂವರು ಹೇಮಾವತಿ ಹಿನ್ನೀರು ಪಾಲು


• ಪ್ರಜೋದಯ ವರದಿ

**ಹಾಸನ:** ಪ್ರವಾಸಕ್ಕೆ ಬಂದಿದ್ದ ಮೂವರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ದಾರುಣ ಘಟನೆ ತಾಲ್ಲೂಕಿನ ಶೆಟ್ಟಿಹಳ್ಳಿ ಚರ್ಚ್ ಸಮೀಪದ ಹೇಮಾವತಿ ಜಲಾಶಯ ಹಿನ್ನೀರಿನಲ್ಲಿ ಭಾನುವಾರ ನಡೆದಿದೆ.

ಬೆಂಗಳೂರಿನ ಗಿರಿ ನಗರದ ಮಣಿಕಂಠ (20), ಚರಣ್ (20), ಮಿಲನ್ (23) ಮೃತಪಟ್ಟಿದ್ದಾರೆ. ನಾಲ್ವರು ಮಹಿಳೆಯರು ಸೇರಿ 10 ಜನರು ಟಿಟಿ ವಾಹನದಲ್ಲಿ ಧರ್ಮಸ್ಥಳ ಪ್ರವಾಸಕ್ಕೆ ಶನಿವಾರ ಬಂದಿದ್ದರು. ಮೃತ ಮೂವರಲ್ಲಿ ಇಬ್ಬರು ಡೆಲಿವರಿ ಬಾಯ್ ಹಾಗು ಒಬ್ಬ ಕಾರು ಚಾಲಕನಾಗಿದ್ದ ಎನ್ನಲಾಗಿದೆ.

ಮಧ್ಯಾಹ್ನ 3.45ರ ಸಮಯದಲ್ಲಿ ಶೆಟ್ಟಿಹಳ್ಳಿ ಚರ್ಚ್‌ಗೆ ಬಂದಿದ್ದ 10 ಜನರಲ್ಲಿ ಐವರು ನೀರಿಗೆ ಇಳಿದಿದ್ದಾರೆ. ನೀರಿನ ಸೆಳೆತಕ್ಕೆ ಮೂವರು ವಾಪಾಸ್ ಬರಲು ಸಾಧ್ಯವಾಗದೆ ಮುಳುಗಿದ್ದು, ಇಬ್ಬರು ವಾಪಾಸ್ ಬಂದಿದ್ದಾರೆ. ಮೃತರಿಗೆ ಈಜು ಬರುತ್ತಿರಲಿಲ್ಲವೆಂದು ತಿಳಿದುಬಂದಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗೊರೂರು ಠಾಣೆ ಪೊಲೀಸರು ಹಾಗು ಅಗ್ನಿಶಾಮಕ ಸಿಬ್ಬಂದಿ ಘಟನೆ ನಡೆದ ಅರ್ಧ ಗಂಟೆಯಲ್ಲಿ ಮಣಿಕಂಠ



ಎಂಬಾತನ ಶವ ಶೋಧಿಸಿ ಹೊರ ತಂದರು. ರಾತ್ರಿ 7 ಗಂಟೆ ವರೆಗೆ ಕಾರ್ಯಾಚರಣೆ ನಡೆಸಲಾಯಿತಾದರೂ ಮತ್ತಿಬ್ಬರ ಶವ ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಕತ್ತಲಾದ್ದರಿಂದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.

**ಗೂಗಲ್‌ನಲ್ಲಿ ನೋಡಿ ಬಂದೆವು**

ಘಟನೆ ಕುರಿತು ಮೃತರ ಸ್ನೇಹಿತ ದಿಲೀಪ್ ಮಾತನಾಡಿ, 10 ಜನರು ಶನಿವಾರ ಬಾಡಿಗೆ ವಾಹನದಲ್ಲಿ ಧರ್ಮಸ್ಥಳಕ್ಕೆ ಬಂದಿದ್ದೆವು. ದೇವರ ದರ್ಶನದ ಬಳಿಕ ಬೆಂಗಳೂರಿಗೆ ವಾಪಾಸ್ಸಾಗುತ್ತಿದ್ದಾಗ ಗೂಗಲ್‌ನಲ್ಲಿ ಹುಡುಕಿದಾಗ ಮಾರ್ಗಮಧ್ಯೆ ಶೆಟ್ಟಿಹಳ್ಳಿ ಚರ್ಚ್ ನೋಡಬಹುದು ಎನಿಸಿತು. ಎಲ್ಲರೂ ಒಪ್ಪಿದ್ದರಿಂದ ಇಲ್ಲಿಗೆ ಬಂದಿದ್ದೆವು ಎಂದರು.

ಚರ್ಚ್ ನೋಡುತ್ತಾ ನಿಂತಿದ್ದಾಗ ಮಣಿಕಂಠ, ಚರಣ್ ಹೊಟ್ಟೆ ಹಸಿವಾಗುತ್ತಿದೆ ಊಟ ತೆಗೆದುಕೊಂಡು ಬರಲು ಹೇಳಿದ್ದರು. ಆಗ ನಾನು ನನ್ನ ತಮ್ಮ ಹೋಟೆಲ್ ಹುಡುಕಿ ಹೋಗಿದ್ದೆವು. ವಾಪಾಸ್ ಬಂದು ಊಟ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗ ಒಬ್ಬ ಆಟವಾಡಲೆಂದು ನೀರಿಗೆ ಇಳಿದಿದ್ದ. ಅವನನ್ನು ಕಂಡು ಮತ್ತೆ ನಾಲ್ವರು ಇಳಿದರು. ಕ್ಷಣಾರ್ಧದಲ್ಲೇ ಒಬ್ಬ ಮುಳುಗಿ, ಅವನ ಹಿಂದೆ ಮತ್ತೆ ಇಬ್ಬರು ನೀರಿನ ಸೆಳೆತಕ್ಕೆ ಸಿಲುಕಿದರೆಂದು ಕಣ್ಣೀರು ಹಾಕಿದ.

ಪ್ರವಾಸಕ್ಕೆಂದು ಜೊತೆಗೆ ಬಂದಿದ್ದವರ ಅಕಾಲಿಕ ನಿಧನಕ್ಕೆ ಸ್ನೇಹಿತರ ಆಕ್ರಂದನ ಮುಗಿಲು ಮುಟ್ಟಿತ್ತು. ಗೊರೂರು ಠಾಣೆ ಸಿಬ್ಬಂದಿ ತಡರಾತ್ರಿ ವರೆಗೆ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು. ಈ ಸಂಬಂಧ ಪ್ರಕರಣ ದಾಖಲಾಗಿದೆ.

# ಆಲೂರು ದ್ವಿಪಥ ಮುಖ್ಯ ರಸ್ತೆ ಕಾಮಗಾರಿ ಪರಿಶೀಲನೆ

• ಪ್ರಜೋದಯ ವರದಿ

**ಆಲೂರು:** ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಪಟ್ಟಣದ ದ್ವಿಪಥ ಮುಖ್ಯರಸ್ತೆ ಕಾಮಗಾರಿ ಅಂತಿಮ ಹಂತ ತಲುಪಿದ್ದು ಶಾಸಕ ಸಿಮೆಂಟ್ ಮಂಜು ಪರಿಶೀಲಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೀಘ್ರದಲ್ಲೇ ರಸ್ತೆ ವಾಹನ ಸಂಚಾರಕ್ಕೆ ಮುಕ್ತವಾಗಲಿದೆ. ರಾಷ್ಟ್ರೀಯ ಹೆದ್ದಾರಿ ಬೈರಾಪುರ ಭಾಗದಿಂದ ಆಲೂರು ಪಟ್ಟಣದ ಮೂಲಕ ಯಡೂರು ಸಮೀಪ ಮತ್ತೆ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ ವೇಗವಾಗಿ ಸಾಗುತ್ತಿದೆ ಎಂದು ಹೇಳಿದರು.

ಕಾಮಗಾರಿ ಪೂರ್ಣಗೊಂಡ ನಂತರ ಸಾರ್ವಜನಿಕರಿಗೆ ಸುಗಮ ಹಾಗು ಸುರಕ್ಷಿತ ಸಂಚಾರ ವ್ಯವಸ್ಥೆ ದೊರೆಯಲಿದ್ದು, ಬಹುಕಾಲದ ಬೇಡಿಕೆ ಈಡೇರಿದಂತಾಗಲಿದೆ. ಈ ರಸ್ತೆಯಲ್ಲಿ ಏಕಪಥ ಸಂಚಾರ ಮಾತ್ರ ಇದ್ದುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದರು. ವಾಹನ ದಟ್ಟಣೆ ಹೆಚ್ಚುವುದರ ಜೊತೆಗೆ



ಅಪಘಾತ ಪ್ರಮಾಣವೂ ಏರಿಕೆಯಾಗಿತ್ತು. ಶಾಸಕನಾಗಿ ಆಯ್ಕೆಯಾದ ಬಳಿಕ ರಸ್ತೆ ದ್ವಿಪಥಗೊಳಿಸುವ ಅಗತ್ಯವನ್ನು ಸರ್ಕಾರದ ಗಮನಕ್ಕೆ ತಂದು ಅನುದಾನ ಮಂಜೂರು ಮಾಡಿಸಿಕೊಂಡಿದ್ದಾಗಿ ಸಿಮೆಂಟ್ ಮಂಜು ಹೇಳಿದರು.

ಏಕಪಥ ರಸ್ತೆಯ ಕಾರಣದಿಂದ ಹಿಂದೆ ಅನೇಕ ಅಪಘಾತಗಳು ಸಂಭವಿಸಿ ಕೆಲವರು ಪ್ರಾಣ ಕಳೆದು ಕೊಂಡಿದ್ದಾರೆ. ಮತ್ತೆ ಕೆಲವರು ಗಂಭೀರ ಗಾಯಗೊಂಡಿದ್ದಾರೆ. ಕಾಮಗಾರಿ ವೇಳೆ ರಸ್ತೆ ಬದಿಯಲ್ಲಿದ್ದ ಮರ, ವಿದ್ಯುತ್ ಕಂಬ ಹಾಗೂ ಪರಿವರ್ತಕಗಳನ್ನು ಅಗತ್ಯಕ್ಕೆ ಅನುಗುಣವಾಗಿ ಸ್ಥಳಾಂತರಿಸಲಾಗಿದೆ. ಕಾಮಗಾರಿ ಆರಂಭವಾದ ಬಳಿಕ ಆರ್ಥಿಕ ಪರಿಸ್ಥಿತಿಗಳ ಪರಿಣಾಮವಾಗಿ ಡಾಂಬರು ಸೇರಿ ನಿರ್ಮಾಣ ಸಾಮಾಗ್ರಿಗಳ ಬೆಲೆಯಲ್ಲಿ ಏರಿಕೆ ಕಂಡು ಬಂದಿದ್ದರಿಂದ ಕೆಲ ಹಂತಗಳಲ್ಲಿ ಕಾಮಗಾರಿ ನಿಧಾನಗೊಂಡಿತ್ತು ಎಂದು ವಿವರಿಸಿದರು.

ರಸ್ತೆ ಅಭಿವೃದ್ಧಿಯಲ್ಲಿ ಪರಿಸರ ಸಂರಕ್ಷಣೆಯತ್ತ ವಿಶೇಷ ಗಮನ ಹರಿಸಲಾಗಿದ್ದು, ರಸ್ತೆಯ ಮಧ್ಯಭಾಗದಲ್ಲಿ ಗಿಡಗಳನ್ನು ನೆಟ್ಟು ಆಕರ್ಷಕ ಹಾಗು ಪರಿಸರ ಸ್ನೇಹಿ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು. ಲೋಕೋಪಯೋಗಿ ಇಲಾಖೆ ಕಿರಿಯ ಇಂಜಿನೀಯರ್ ಮಧು, ಇಲಾಖೆ ಅಧಿಕಾರಿಗಳು ಹಾಗು ಸ್ಥಳೀಯರು ಹಾಜರಿದ್ದರು.

## ಗಂಡಸಿ ಗ್ರಾಮಸ್ಥರ ಗಂಭೀರ ಆರೋಪ | 10 ಲಕ್ಷ ರೂ. ವಿಚಾರವಾಗಿ ವಾಗ್ವಾದ

# ರಾಜಕೀಯ ಲಾಭಕ್ಕಾಗಿ ಎನ್.ಆರ್.ಸಂತೋಷ್ ಗುಂಪುಗಾರಿಕೆ

• ಪ್ರಜೋದಯ ವರದಿ

**ಅರಸೀಕೆರೆ:** ಗ್ರಾಮಸ್ಥರಲ್ಲೇ ಗುಂಪುಗಾರಿಕೆ ಮಾಡಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನವನ್ನು ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಮಾಡುತ್ತಿದ್ದಾರೆಂದು ತಾಲ್ಲೂಕಿನ ಗಂಡಸಿ ಗ್ರಾಮಸ್ಥರು ಆರೋಪಿಸಿದ್ದಾರೆ.

ಭಾನುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗಂಡಸಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗರಾಜು ಅವರು, ದೇವರ ಹೆಸರಿನಲ್ಲಿ ರಾಜಕಾರಣ ಮಾಡುವುದು, ಗ್ರಾಮಸ್ಥರ ನಡುವೆ ಗುಂಪುಗಾರಿಕೆ ಮಾಡಿ ಅಶಾಂತಿ ಸೃಷ್ಟಿಸುವುದು ಸಭ್ಯ ರಾಜಕಾರಣಿಯ ಲಕ್ಷಣವಲ್ಲ. ಲಾಳನಕೆರೆ ಗ್ರಾಮ ದೇವತೆ ಕಾಳಿಕಾಂಬ ದೇವಾಲಯದ ಅಭಿವೃದ್ಧಿಗೆ 10 ಲ.ರೂ. ದೇಣಿಗೆ ವಿಷಯಕ್ಕೆ ಸಂಬಂಧಿಸಿ ಅವರದ್ದೇ ಪಕ್ಷದ ಮತ್ತೊಂದು ಬಣದ ಮುಖಂಡ ಯೋಗೀಶ್



ಅವರಿಗೆ 10 ಲ.ರೂ. ಹಣ ನೀಡಿರುವುದಾಗಿ ಯುವಕನೊಂದಿಗೆ ಸಂತೋಷ್ ಮಾತನಾಡಿದ್ದಾರೆ. ನಂತರ ಯೋಗೀಶ್ ಎಂಬಾತನನ್ನು ಕಂಬಕ್ಕೆ ಕಟ್ಟಿ ಹೊಡೆಯಿರಿ, ಬೆಂಕಿ ಹಚ್ಚಿರಿ ಎಂದು ಎನ್.ಆರ್.ಸಂತೋಷ್ ಪ್ರಚೋದಿಸಿದ್ದಾರೆ. ಹೀಗೆಲ್ಲಾ ಮಾತನಾಡಿರುವ ಆಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಾಜಕೀಯ ಲಾಭಕ್ಕಾಗಿ ಗ್ರಾಮಸ್ಥರ ನಡುವೆ ಕಲಹ ಸೃಷ್ಟಿಸುವುದು ಸಂತೋಷ್‌ಗೆ ಕರಗತವಾಗಿದೆ. ಈ ಪ್ರಕರಣದಲ್ಲಿ ಶಾಸಕ ಶಿವಲಿಂಗೇಗೌಡರ ಹೆಸರು ಕೆಡಿಸುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇವಾಲಯಕ್ಕೆ ಸೇರಬೇಕಿದ್ದ 10 ಲ.ರೂ. ಎಲ್ಲಿ ಎಂದು ಗ್ರಾಮದ ಯೋಗೀಶ್ ಅವರನ್ನು ಕೇಳಿದಾಗ ಸಂತೋಷ್ ಕೈಗೆ 4 ಲ.ರೂ.ಗಳನ್ನು ನಗರದ ವರ್ತಕರೊಬ್ಬರಿಂದ ನಾಲ್ಕಾರು ಜನರ ಎದುರು ಕೊಡಿಸಿದ್ದೆ. ಉಳಿದ 6 ಲ.ರೂ. ಹಣವನ್ನು ನನಗೆ ನೀಡಿಲ್ಲ. ಈ ಬಗ್ಗೆ ನಾನು ಪ್ರಮಾಣ ಮಾಡಲು ಗ್ರಾಮದ ಕಾಳಿಕಾಂಬ ದೇವಾಲಯದಲ್ಲಿ ಕರ್ಪೂರ ಹಚ್ಚುವುದಾಗಿ ಹೇಳಿದ್ದರು. ಅದರಂತೆ ಎನ್.ಆರ್.ಸಂತೋಷ್ ಹಾಗು ಯೋಗೀಶ್ ದೇವಸ್ಥಾನಕ್ಕೆ ಬಂದಾಗ ಜೋರು ಗಲಾಟೆಯಾಗಿತ್ತು ಎಂದರು.

ಆ ದಿನದ ಸಭೆಯಲ್ಲಿ ಸಂತೋಷ್ ಅವರ ಕಡೆಯಿಂದ 4 ಲ.ರೂ. ದೇವಾಲಯಕ್ಕೆ ಬಂದಿದ್ದು, ಉಳಿದ 6 ಲ.ರೂ. ತಲುಪಿರುವುದಕ್ಕೆ ಸ್ಪಷ್ಟ ಉತ್ತರ ಸಿಗದೇ ಇದ್ದಿದ್ದರಿಂದ ಸಹಜವಾಗಿ ಗ್ರಾಮಸ್ಥರು ಸಂತೋಷ್‌ಗೆ ಘೇರಾವು ಹಾಕಿದ್ದರು. ಈ ಸಂದರ್ಭದಲ್ಲಿ ಪೊಲೀಸರು ಸಹ ಇದ್ದರೆಂದರು.

**ಶಿವಲಿಂಗೇಗೌಡರ ಹೆಸರು ಕೆಡಿಸುವ ಯತ್ನ**

ಆ ದಿನ ಗ್ರಾಮದಲ್ಲಿ ನಡೆದ ರಾಜಿ ಪಂಚಾಯಿತಿ ಸುಖಾಂತ್ಯ ಕಂಡಿರಲಿಲ್ಲ. ಆದರೆ, ಆ ಬಳಿಕ ಎನ್.ಆರ್. ಸಂತೋಷ್ ಹಾಗು ಬೆಂಬಲಿಗರು ಈ ವಿವಾದದಲ್ಲಿ ಶಾಸಕ ಕೆ.ಎಂ. ಶಿವಲಿಂಗೇಗೌಡರ ಹೆಸರು ತಳುಕು ಹಾಕಲಾಗುತ್ತಿದೆ. ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟ ವಿಸ್ತರಣೆ ಹಿನ್ನಲೆಯಲ್ಲಿ ಶಾಸಕರು ಬೆಂಗಳೂರಿನಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಲಾಳನಕೆರೆ ದೇವಸ್ಥಾನದ ಹೆಸರಲ್ಲಿ ನಡೆದಿರುವ ಅವ್ಯವಹಾರ ದಲ್ಲಿ ಶಾಸಕರ ಹೆಸರು ಬಳಸಿಕೊಳ್ಳಲಾಗುತ್ತಿದೆ. ಶಿವಲಿಂಗೇಗೌಡರ ಹೆಸರನ್ನು ಎಳೆದು ತರುವ ಮೂಲಕ ನೀತಿಗೆಟ್ಟ ರಾಜಕಾರಣ ಮಾಡುತ್ತಿದ್ದಾರೆಂದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಆಗ್ರೋ ಬಾಬು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ಅಧ್ಯಕ್ಷ ಜಯರಾಂ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ನಿರ್ದೇಶಕ ರಾಮಚಂದ್ರ, ನಾಗೇನಹಳ್ಳಿ ವೆಂಕಟೇಶ್, ಪರಮೇಶ್ ಮತ್ತಿತರರಿದ್ದರು.

# ಗೋ ಶಾಲೆ ಬಲವರ್ಧನೆ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ

**ಅರಸೀಕೆರೆ:** ಪಶು ಸಂಗೋಪನೆಯು ಕೃಷಿ ಆರ್ಥಿಕತೆಯ ಪ್ರಮುಖ ಅಂಗವಾಗಿದ್ದು, ಸಣ್ಣ ಮತ್ತು ಅತಿ ಸಣ್ಣ ರೈತರ ಆದಾಯದ ಶೇ.70ರಷ್ಟು ಭಾಗ ಪಶುಪಾಲನೆಯಿಂದಲೇ ಬರುತ್ತದೆಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ನಗರ ಹೊರವಲಯದ ಗೀಜಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೋರನಕೊಪ್ಪಲು ಸರ್ಕಾರಿ ಗೋಶಾಲೆ ಆವರಣದಲ್ಲಿ ಪಶುಪಾಲನ ಮತ್ತು ಪಶುವೈದ್ಯ ಸೇವಾ ಇಲಾಖೆ



ಯಿಂದ 1 ಕೋ.ರೂ. ವೆಚ್ಚದಲ್ಲಿ ಕೈಗೊಂಡಿರುವ ಗೋ ಶಾಲೆ ಬಲವರ್ಧನೆ ಮತ್ತು ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವಾಗಿದೆ. ಪಶು ಸಂಗೋಪನೆಯು ಕೋಟ್ಯಾಂತರ ಜನರ ಜೀವನೋಪಾಯದ ಮೂಲವಾಗಿದೆ. ರೈತ ಕುಟುಂಬಗಳಿಗೆ ಇದು ನಿತ್ಯ ಆದಾಯದ ಪ್ರಮುಖ ಆಧಾರವಾಗಿದ್ದು, ಗ್ರಾಮೀಣ ಆರ್ಥಿಕತೆಯನ್ನು ಸದೃಢಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆಂದರು.

ಪುರಾತನ ಕಾಲದಿಂದಲೂ ಹಿಂದೂ ಧರ್ಮದಲ್ಲಿ ಗೋವುಗಳಿಗೆ ವಿಶೇಷ ಸ್ಥಾನಮಾನವಿದೆ. ಸನಾತನ ಸಂಪ್ರದಾಯದಲ್ಲಿ ಗೋಮಾತೆಗೆ ದೈವಿಕ ಸ್ಥಾನ

» ನಾಲ್ಕನೇ ಪುಟದಲ್ಲಿ

## ಜೂ. 16ಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ


ಬೆಂಗಳೂರು: ಕರ್ನಾಟಕ ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣೆ ಹಿನ್ನಲೆಯಲ್ಲಿ ರಾಜಕೀಯ ಚಟುವಟಿಕೆಗಳನ್ನು ಚುರುಕುಗೊಳಿಸಿದ್ದು, ಜೂ.16ರಂದು ಶಾಸಕಾಂಗ ಪಕ್ಷದ ಸಭೆ ನಿಗದಿಪಡಿಸಿದೆ. ಮಂಗಳವಾರ ಸಂಜೆ 6 ಗಂಟೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮ ನಗರ ತಾಲ್ಲೂಕಿನ ಬಿಡದಿ ಬಳಿ ಇರುವ ವಂಡರ್‌ಲಾ ರೆಸಾರ್ಟ್‌ನಲ್ಲಿ ಸಭೆ ಆಯೋಜನೆಗೊಂಡಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಯಲಿದೆ.

# ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿದ ಚಿರತೆ ಸಂಚಾರ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ತಿಪಟೂರು ರಸ್ತೆಯಲ್ಲಿರುವ ಇಂಜಿನೀಯರಿಂಗ್ ಕಾಲೇಜು ಹಾಗು ಕೆಲ್ಲಂಗೆರೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಚಿರತೆ ಸಂಚಾರ ಹೆಚ್ಚಾಗಿದ್ದು, ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಜೂ.11ರ ರಾತ್ರಿ ಸುಮಾರು 8.20ರ ವೇಳೆಗೆ ಕೆಲ್ಲಂಗೆರೆ ಗ್ರಾಮ ಪಂಚಾಯಿತಿ ಸದಸ್ಯ ಸ್ವಾಮಿ ಅವರ ತೋಟದಲ್ಲಿ ಚಿರತೆಯೊಂದು ದಾಳಿ ನಡೆಸಿ ಸಾಕಿದ್ದ ನಾಯಿಯನ್ನು ಎತ್ತಿಕೊಂಡು ಹೋಗಿದೆ. ಸ್ವಾಮಿ ಅವರು



ಮನೆಗೆ ಊಟ ತರಲು ತೆರಳಿದ್ದ ಕೆಲವೇ ನಿಮಿಷಗಳಲ್ಲಿ ಈ ಘಟನೆ ನಡೆದಿರುವುದಾಗಿ ತಿಳಿದುಬಂದಿದೆ.

ಅದಕ್ಕೂ ಮೊದಲು ರಾಮಸಾಗರ ಗ್ರಾಮದ ಸಮೀಪ ಮಧ್ಯಾಹ್ನ 2 ಗಂಟೆ ವೇಳೆಗೆ ಚಿರತೆಯು ಹಸುವೊಂದರ ಮೇಲೆ ದಾಳಿ ನಡೆಸಿ ಕೊಂದಿರುವ ಘಟನೆ ವರದಿಯಾಗಿದೆ. ಒಂದರ ಹಿಂದೆ ಒಂದರಂತೆ ನಡೆಯುತ್ತಿರುವ ದಾಳಿಗಳಿಂದ ಅರಸೀಕೆರೆ ಸುತ್ತಮುತ್ತಲಿನ ಗ್ರಾಮಗಳ ಜನರು ಬೆಚ್ಚಿಬಿದ್ದಿದ್ದಾರೆ.

» ನಾಲ್ಕನೇ ಪುಟದಲ್ಲಿ

# ನಿರಂತರ ಮಳೆಗೆ ಕುಸಿದ ಮನೆ ಗೋಡೆ

• ಪ್ರಜೋದಯ ವರದಿ

**ನುಗ್ಗೇಹಳ್ಳಿ:** ಕಳೆದ ಎರಡು ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿ ಹೋಬಳಿ ದುಗ್ಗೇನಹಳ್ಳಿ ಗ್ರಾಮದಲ್ಲಿ ಮನೆ ಗೋಡೆ ಹಾಗು ಛಾವಣಿ ಕುಸಿದು ನಷ್ಟವುಂಟಾಗಿದೆ.

ಗ್ರಾಮದ ಪುಟ್ಟಮ್ಮ ಬೆಟ್ಟೇಗೌಡ ಅವರ ವಾಸದ ಮನೆಗೆ ಮಳೆಯಿಂದ ಹಾನಿಯಾಗಿದ್ದು, ಆಹಾರ ಸಾಮಾಗ್ರಿ, ಹಾಗು ಇತರ ಗೃಹೋಪಯೋಗಿ ವಸ್ತುಗಳು ಹಾನಿಗೀಡಾಗಿವೆ. ಅದೃಷ್ಟವಶಾತ್ ಘಟನೆ ವೇಳೆ ಮನೆಯಲ್ಲಿದ್ದವರಿಗೆ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮನೆಯು ವಾಸಯೋಗ್ಯವಲ್ಲದ ಸ್ಥಿತಿಗೆ ತಲುಪಿರುವುದರಿಂದ ಕುಟುಂಬದವರು ಆತಂಕಕ್ಕೆ ಒಳಗಾಗಿದ್ದಾರೆ.

ಘಟನಾ ಸ್ಥಳಕ್ಕೆ ಗ್ರಾಮ ಲೆಕ್ಕಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಹಾನಿಯ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿ ಸಲ್ಲಿಸಿ ಅಗತ್ಯ ನೆರವು ಒದಗಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಈ ನಡುವೆ ಮಾನವೀಯತೆ ಮೆರೆದ ಗ್ರಾಮಸ್ಥರು, ಪುಟ್ಟಮ್ಮ ಅವರ ಕುಟುಂಬದ ಐವರು ಸದಸ್ಯರಿಗೆ ತಾತ್ಕಾಲಿಕವಾಗಿ ವಾಸಿಸಲು ಬೇರೆ ಮನೆಯ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಮಳೆ ಹಾನಿಯಿಂದ ಸಂಕಷ್ಟಕ್ಕೆ ಸಿಲುಕಿರುವ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಹಾಗು ವಸತಿ ನೆರವು ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



## ಕಾಂಗ್ರೆಸ್ ಪಾಳಯದ ತಳಹಂತದ ಕೂಗು | ಲಾಬಿಗೆ ಮಣಿಯದೆ ಅರ್ಹರ ಪರಿಗಣಿಸಿ

# ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆ ಸಿಗಲಿ ಕೂಲಿ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಪಕ್ಷಕ್ಕಾಗಿ ದುಡಿದ್ದೇವೆ ಕೂಲಿ ಕೊಡಿ ಎಂಬ ಪ್ರಸ್ತುತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗು ಸಹೋದರ ಡಿ.ಕೆ. ಸುರೇಶ್ ಅವರ ಜನಪ್ರಿಯ ವಾಕ್ಯವನ್ನು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಕೇಳುತ್ತಿದ್ದು, ಪಕ್ಷಕ್ಕಾಗಿ ಹಗಲಿರುಳು ದುಡಿದವರಿಗೆ ಪ್ರಾಶಸ್ತ್ಯ ಸಿಗಲಿ ಎಂಬ ಒತ್ತಾಯ ಜೋರಾಗಿದೆ.

ಕಾಂಗ್ರೆಸ್ ನಾಯಕರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವ ಸ್ಥಾನಗಳ ರೂಪದಲ್ಲಿ ತಮ್ಮ ರಾಜಕೀಯ ಕೂಲಿ ಪಡೆದಿದ್ದಾರೆ. ನೀವು ನಿಮ್ಮ ಕೂಲಿ ಪಡೆದಂತೆ ನಮಗೂ ನಮ್ಮ ಕೂಲಿ ಕೊಡಿ ಎಂಬ ಧ್ವನಿ ಕಾರ್ಯಕರ್ತರಿಂದ ಕೇಳಿಬರುತ್ತಿದೆ.

**ಪಕ್ಷ ನಿಷ್ಠೆ-ಹಿರಿತನ ಪರಿಗಣಿಸಿ**

ಜೆಡಿಎಸ್ ಭದ್ರಕೋಟೆಯಾಗಿರುವ ಹಾಸನದಲ್ಲಿ ಕಾಂಗ್ರೆಸ್‌ಗೆ ಭದ್ರ ನೆಲೆ ಕಂಡುಕೊಳ್ಳುವುದು ಸುಲಭದ ಮಾತಲ್ಲ. ಅರಸೀಕೆರೆ ವಿಧಾನಸಭಾ ಕ್ಷೇತ್ರ, ಲೋಕಸಭಾ ಸ್ಥಾನ ಹೊರತುಪಡಿಸಿದರೆ ಕಾಂಗ್ರೆಸ್‌ನಿಂದ ಚುನಾಯಿತ ಪ್ರತಿನಿಧಿಗಳು ಇಲ್ಲ. ಮುಂಬರುವ ಗ್ರಾಮ ಪಂಚಾಯಿತಿ, ತಾಲ್ಲೂಕು-ಜಿಲ್ಲಾ ಪಂಚಾಯಿತಿ ಹಾಗು ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು



ಗೆದ್ದರಷ್ಟೇ 2028ರ ವಿಧಾನಸಭೆ ಹಾಗು ನಂತರದ ಲೋಕಸಭೆ ಚುನಾವಣೆಗೆ ಸಹಕಾರವಾಗಲಿದೆ. ಆದ್ದರಿಂದ ಹೊಸ್ತಿಲಲ್ಲಿರುವ ಚುನಾವಣೆಗೆ ಟಿಕೆಟ್ ನೀಡುವಾಗ ಪಕ್ಷನಿಷ್ಠೆ-ಹಿರಿತನ ಪರಿಗಣಿಸಬೇಕೆಂಬುದು ದಶಕಗಳಿಂದ ಪಕ್ಷಕ್ಕಾಗಿ ದುಡಿಯುತ್ತಿರುವ ಕಾರ್ಯಕರ್ತರ ಅಂಬೋಣವಾಗಿದೆ.

ಬಿಜೆಪಿ-ಜೆಡಿಎಸ್ ವಿರುದ್ಧದ ಹೋರಾಟಗಳಲ್ಲಿ ಬೀದಿಗಿಳಿದವರು, ಪ್ರತಿಭಟನೆಗಳಲ್ಲಿ ಪಾಲ್ಗೊಂಡವರು, ಬೂತ್ ಮಟ್ಟದಲ್ಲಿ ಪಕ್ಷ ಕಟ್ಟಿದವರು ಹಾಗು ಅಧಿಕಾರದಲ್ಲಿಲ್ಲದ ಸಂದರ್ಭದಲ್ಲೂ ಪಕ್ಷದ ಧ್ವಜ ಹಿಡಿದು ನಿಂತವರು ಈಗ ತಮ್ಮ ಸೇವೆಗೆ ರಾಜಕೀಯ ಮಾನ್ಯತೆ ಸಿಗಬೇಕೆಂದು ಒತ್ತಾಯಿಸುತ್ತಿದ್ದಾರೆ.

**ಲಾಬಿ ಬಿಟ್ಟು ಶಿಸ್ತಿಗೆ ಬೆಲೆ ಕೊಡಿ**

ರಾಜ್ಯದಲ್ಲಿ ಶೀಘ್ರದಲ್ಲೇ ಭರ್ತಿಯಾಗಲಿರುವ ಏಳು ವಿಧಾನ ಪರಿಷತ್ ಸ್ಥಾನ ಹಾಗು ನಿಗಮ-ಮಂಡಳಿಗಳ ಅಧ್ಯಕ್ಷರ ನೇಮಕ ಪ್ರಕ್ರಿಯೆ ಕಾಂಗ್ರೆಸ್ ಸಂಘಟನೆಯ ವಿವಿಧ ಹಂತಗಳ ನಾಯಕರಲ್ಲಿ ನಿರೀಕ್ಷೆ ಮೂಡಿಸಿದೆ.

ಚುನಾವಣೆ ಬಂದಾಗ ಕಾರ್ಯಕರ್ತರು ಬೇಕು, ಹೋರಾಟ ಬಂದಾಗ ಕಾರ್ಯಕರ್ತರು ಬೇಕು, ಪಕ್ಷ ಸಂಕಷ್ಟದಲ್ಲಿದ್ದಾಗ ಕಾರ್ಯಕರ್ತರೇ ಬೆನ್ನೆಲುಬಾಗಿರುತ್ತಾರೆ. ಹೀಗಾಗಿ ಹುದ್ದೆಗಳ ಹಂಚಿಕೆ ವೇಳೆ ಕಾರ್ಯಕರ್ತರನ್ನು ಪಕ್ಷ ಮರೆಯುವುದಿಲ್ಲ ಎಂಬ ವಿಶ್ವಾಸವಿದೆ. ಈಗಾಗಲೇ ನಾಯಕರು ತಮ್ಮ ರಾಜಕೀಯ ಕೂಲಿ ಪಡೆದಿದ್ದಾರೆ. ನಿಷ್ಠಾವಂತ ಕಾರ್ಯಕರ್ತರಿಗೂ ನ್ಯಾಯ ಕೊಡಿಸಬೇಕೆಂದು ಪಕ್ಷದ ಕಾರ್ಯಕರ್ತ ರವಿ ಅಭಿಪ್ರಾಯಪಟ್ಟಿದ್ದಾರೆ.

### ಶಿವಲಿಂಗೇಗೌಡರಿಂದಲೂ ಹೆಚ್ಚಿದ ಒತ್ತಡ

ಹಾಸನ ಜಿಲ್ಲಾ ಉಸ್ತುವಾರಿ ಜವಾಬ್ದಾರಿಯನ್ನು ತನಗೆ ನೀಡಬೇಕೆಂದು ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಕೆ.ಎಂ. ಶಿವಲಿಂಗೇಗೌಡ ಆಗ್ರಹಿಸುತ್ತಲೇ ಇದ್ದಾರೆ. ಜೆಡಿಎಸ್‌ನಿಂದ ಸತತ ಮೂರು ಬಾರಿ ಗೆಲುವು ಸಾಧಿಸಿದ್ದ ಅವರು 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಸೇರಿದ್ದರು. ಪಕ್ಷ ಅಧಿಕಾರಕ್ಕೆ ಬಂದರೆ ಸಚಿವ ಸ್ಥಾನ ನೀಡುವ ಖಚಿತ ಭರವಸೆ ನೀಡಲಾಗಿತ್ತು. ಆದರೆ ಮೂಲ ಕಾಂಗ್ರೆಸ್ ನಾಯಕರನ್ನು ಬಿಟ್ಟು ಬೇರೆ ಪಕ್ಷದಿಂದ ಬಂದವರಿಗೆ ಮೊದಲ ಬಾರಿಗೆ ಅವಕಾಶ ನೀಡುವುದು ಬೇಡವೆಂಬ ಮಾನದಂಡ ಅಡ್ಡಬಂದಿದ್ದರಿಂದ ಶಿವಲಿಂಗೇಗೌಡರಿಗೆ ಹಿನ್ನಡೆಯಾಗಿದೆ. ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಾದರೂ ತಮಗೆ ಅದೃಷ್ಟ ಖುಲಾಯಿಸಲಿದೆ ಎಂಬ ನಂಬಿಕೆಯಲ್ಲಿ ಅವರಿದ್ದಾರೆ.

**ಸ್ಥಳೀಯರಿಗೆ ಉಸ್ತುವಾರಿ ನೀಡಲಿ**

ಜಿಲ್ಲಾ ಉಸ್ತುವಾರಿ ಸಚಿವರಾಗಿ ಸ್ಥಳೀಯ ಶಾಸಕ ಕೆ.ಎಂ.ಶಿವಲಿಂಗೇಗೌಡರಿಗೆ ಅವಕಾಶ ಕಲ್ಪಿಸಬೇಕೆಂದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸುತ್ತಿದ್ದಾರೆ. ಈ ಸರ್ಕಾರದಲ್ಲಿ ಇಬ್ಬರು ಅಂದರೆ ಕೆ.ಎನ್.ರಾಜಣ್ಣ ಹಾಗು ಕೃಷ್ಣಬೈರೇಗೌಡ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಿದ್ದು ಇಬ್ಬರೂ ಹೊರ ಜಿಲ್ಲೆಯವರಾಗಿರುವುದರಿಂದ ಕಾರ್ಯಕರ್ತರ ಜೊತೆ ಒಡನಾಟ ಅಷ್ಟಕ್ಕಷ್ಟೇ ಎಂಬಂತಾಗಿದೆ. ಕೃಷ್ಣಬೈರೇಗೌಡ ಅವರು ಸಚಿವರಾದ ಬಳಿಕ ಪಕ್ಷ ಸಂಘಟನೆ ದೃಷ್ಟಿಯಿಂದ ಯಾವ ಕೆಲಸಗಳು ಆಗಿಲ್ಲ. ಇನ್ನು ಮುಂದೆಯೂ ಬೇರೆ ಜಿಲ್ಲೆಯವರಿಗೆ ಅವಕಾಶ ಕಲ್ಪಿಸಿದರೆ ಮುಂಬರುವ ಚುನಾವಣೆಗಳ ಮೇಲೆ ಹೊಡೆತ ಬೀಳುತ್ತದೆ. ಸ್ಥಳೀಯ ಶಾಸಕರೇ ಉಸ್ತುವಾರಿ ಹೊಣೆ ಹೊತ್ತರೆ ಅಭಿವೃದ್ಧಿ ಕಾರ್ಯಗಳಿಗೆ ವೇಗ ಸಿಗುವುದರ ಜೊತೆಗೆ ಪಕ್ಷದ ಸಂಘಟನೆಯೂ ಬಲಗೊಳ್ಳಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಕೆ.ಎಂ. ಶಿವಲಿಂಗೇಗೌಡ ಅವರು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕೈಗೊಂಡಿರುವ ಕಾರ್ಯಚಟುವಟಿಕೆಗಳು ಹಾಗು ಆಡಳಿತ ಅನುಭವವನ್ನು ಹೈಕಮಾಂಡ್ ನಾಯಕರು ಪರಿಶೀಲಿಸುತ್ತಿದ್ದಾರೆ ಎನ್ನಲಾಗುತ್ತಿದೆ. ಸಚಿವ ಸ್ಥಾನ ಅಥವಾ ಜಿಲ್ಲಾ ಉಸ್ತುವಾರಿ ಹೊಣೆ ನೀಡುವ ಸಂದರ್ಭದಲ್ಲಿ ಅವರ ಕಾರ್ಯಕ್ಷಮತೆ, ಪಕ್ಷದ ಸಂಘಟನೆಗೆ ನೀಡಿರುವ ಕೊಡುಗೆ ಮತ್ತು ಭವಿಷ್ಯದ ರಾಜಕೀಯ ಸಮೀಕರಣಗಳನ್ನು ಗಮನದಲ್ಲಿಟ್ಟು ಕೊಳ್ಳುವ ಸಾಧ್ಯತೆ ಇದೆ.

CMYK CMYK CMYK CMYK

# ಭಾವ ಲಹರಿ

## ದೇಶದ ಬಲಿಪೀಠದ ಮುಂದೆ ನಿಂತು ಮಾಡಿಕೊಂಡ ಪವಿತ್ರ ಒಪ್ಪಂದವೇ ಈ ಪ್ರೀತಿ

ಅಂದಿನ ಬ್ರಿಟೀಷ್ ಭಾರತ ಇಂದಿನಂತಲ್ಲ. ಬಹಳ ಕಠಿಣವಾದ ಕಾಲವಾಗಿತ್ತು. ಭಾರತೀಯರು ಸ್ವಾತಂತ್ರ್ಯವನ್ನು ಕಳೆದುಕೊಂಡು ಬ್ರಿಟೀಷರ ಊಳಿಗದವರಾಗಿ ಬದುಕುತ್ತಿದ್ದ ಕಾಲವಾಗಿತ್ತು. ಸ್ವಾತಂತ್ರ್ಯ ಎಂಬ ದನಿ ಯಾವ ಮೂಲೆಯಿಂದ ಬಂದರೂ ಅದನ್ನು ಬ್ರಿಟಿಷರು ತಮ್ಮ ಲಾಠಿಯಿಂದ, ಬೂಟುಗಳಿಂದ, ಬಂದೂಕುಗಳಿಂದ ಅಡಗಿಸುತ್ತಿದ್ದರು. ಹೀಗಿರುವಲ್ಲಿ 1942 ರ ಆಗಸ್ಟ್ ತಿಂಗಳು. ಭಾರತ ಬಿಟ್ಟು ತೊಲಗಿ ಚಳುವಳಿಯ ಕಿಡಿ ಇಡೀ ದೇಶವನ್ನು ಕಬಳಿಸಲು ಹವಣಿಸುತ್ತಿದ್ದ ಕಾಳ್ಗಿಚ್ಚಿನಂತೆ ಹರಡಿತ್ತು. ಮಾಡು ಇಲ್ಲವೇ ಮಡಿ ಎಂಬ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಒಂದು ಕರೆ ಮಿಂಚಿನಂತೆ ವ್ಯಾಪಿಸಿ, ಭಾರತೀಯರನ್ನು ಬಡಿದೆಬ್ಬಿಸಿತ್ತು. ಜನರ ಆಕ್ರೋಶ ಮುಗಿಲು ಮುಟ್ಟಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಡಿಪಾಯ ಪೆಟ್ಟುತಿಂದ ಬಾಳೆಯ ದಿಂಡಿನಂತೆ ಅಲ್ಲಾಡುತ್ತಿತ್ತು. ಅದೇ ರೊಚ್ಚಿನ ದಿನದ ಒಂದು ಕಡುಗತ್ತಲೆಯ ರಾತ್ರಿ, ಮಳೆ ಮುಗಿಲನ್ನು ಸೀಳಿಕೊಂಡು ಸುರಿಯುವಂತೆ ಗುಂಡುಗಳ ಸುರಿಮಳೆಯಾಗುತ್ತಿತ್ತು. ಬ್ರಿಟಿಷ್ ಸೈನಿಕರ ಚಕ್ರವ್ಯೂಹವನ್ನು ಭೇದಿಸಿ, ಹಸಿದ ಸಿಂಹದಂತೆ ಓಡುತ್ತಿದ್ದ ಪ್ರತಾಪ್, ರಕ್ತಸಿಕ್ತ ಮುಖದೊಂದಿಗೆ ಗಾಯಿತ್ರಿಯ ಮನೆಯ ಹಿತ್ತಲಿಗೆ ಬಂದು ದೊಪ್ ಎಂದು ಬಿದ್ದನು. ಅವನ ದೇಹದಲ್ಲಿದ್ದ ಗಾಯಗಳಿಂದ ರಕ್ತ ಹರಿಯುತ್ತಿದ್ದರೆ, ಕಣ್ಣುಗಳಲ್ಲಿ ಮಾತ್ರ ಸ್ವಾತಂತ್ರ್ಯದ ಕಿಚ್ಚು ದೀಪದಂತೆ ಪ್ರಜ್ವಲಿಸುತ್ತಿತ್ತು. ಹಿತ್ತಲಿನಲ್ಲಿ ಸದ್ದು ಕೇಳಿ ಕದ ತೆರೆದು ಹೊರಗೆ ಬಂದ ಗಾಯಿತ್ರಿ ಗಾಬರಿಯಾದಳು. ಆದರೆ, ಸುಂಟರಗಾಳಿಗೆ ಸಿಕ್ಕಿದರೂ ನಂದದ ದೀಪದಂತೆ ಅವಳು ತನ್ನ ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಗಾಯಿತ್ರಿ (ಗಾಬರಿಯಿಂದ ದೀಪವನ್ನು ಪಕ್ಕಕ್ಕಿಟ್ಟು, ಅವನನ್ನು ಎಬ್ಬಿಸುತ್ತಾ) ಅಯ್ಯೋ! ಯಾರಿದು? ಬೇಟೆಗಾರನ ಬಾಣಕ್ಕೆ ಸಿಕ್ಕಿ ನಲುಗಿದ ಹದ್ದಿನಂತೆ ರಕ್ತದ ಮಡುವಿನಲ್ಲಿ ಬಿದ್ದಿದ್ದೀರಲ್ಲ! ಎದೆಯಿಂದ ರಕ್ತ ಕಾರಂಜಿಯಂತೆ ಚಿಮ್ಮುತ್ತಿದೆ... ಇಷ್ಟೊಂದು ರಕ್ತ! ಎದೆಯಲ್ಲಾ ಗಾಯವಾಗಿದೆ... ಬನ್ನಿ, ಒಳಗೆ ಬನ್ನಿ ಎಂದಾಗ , ಪ್ರತಾಪ್ (ನೋವಿನಿಂದ ಮುಲುಗುತ್ತಾ, ಅವಳನ್ನು ತಳ್ಳಲು ಯತ್ನಿಸುತ್ತಾ) ಹತ್ತಿರ ಬರಬೇಡ ಹುಡುಗಿ... ನನ್ನನ್ನು ಇಲ್ಲೇ ಬಿಟ್ಟು ಒಳಗೋಗಿ ಬಾಗಿಲು ಹಾಕಿಕೊ. ಹೊರಗೆ ಬ್ರಿಟಿಷ್ ಕಾವಲು ನಾಯಿಗಳು ನನ್ನ ರಕ್ತದ ವಾಸನೆ ಹಿಡಿದು ಬರುತ್ತಿದ್ದಾರೆ. ನನ್ನನ್ನು ಉಳಿಸಲು ಹೋಗಿ ನಿನ್ನ ಪ್ರಾಣಕ್ಕೆ ನೀನೇ ಉರುಳು ಹಾಕಿಕೊಳ್ಳಬೇಡ! ಎಂದನು. ಆದರೆ ಗಾಯಿತ್ರಿ ತನ್ನ ಚಾಣಾಕ್ಷತನದಿಂದ ಅವನನ್ನು ಮನೆಯೊಳಗೆ ಕರೆದುಕೊಂಡು ಹೋಗಿ, ಗಾಯಗಳಿಗೆ ಹಸಿರು ಮೂಲಿಕೆಯ ಮದ್ದು ಸವರಿದಳು. ಅದು ಕೇವಲ ಔಷಧಿಯಾಗಿರಲಿಲ್ಲ; ನೊಂದ ಜೀವಕ್ಕೆ ಸಿಕ್ಕ ಸಂಜೀವಿನಿಯಂತಿತ್ತು.

**★ಗಾಯಿತ್ರಿ★ - ★ಬೆಳಕಿನ ಕಿರಣ★:** ಆಗ ಗಾಯಿತ್ರಿ (ದೀಪದ ಬೆಳಕಿನಲ್ಲಿ ಅವನ ಕಣ್ಣುಗಳನ್ನು ದಿಟ್ಟಿಸಿ ನೋಡುತ್ತಾ): ದೇಶದ ಮುಕ್ತಿಗೆ ತನ್ನ ತನವನ್ನೇ ಸಮರ್ಪಿಸಲು ಹೊರಟಿರುವ ನಿಮಗೆ ಇಲ್ಲದ ಹೆದರಿಕೆ, ನಿಮಗಾಗಿ ಒಂದು ಸಣ್ಣ ನೆರಳು ಕೊಡಲು ನನಗೇಕೆ? ಬಿರುಗಾಳಿಗೆ ಹೆದರಿ ಸಾಗರ ತನ್ನ ಅಲೆಗಳನ್ನು ನಿಲ್ಲಿಸುವುದೇ? ನೀವು ಸುಮ್ಮನೆ ಕುಳಿತುಕೊಳ್ಳಿ. ಎಂದಳು. ಕೂಡಲೇ ಪ್ರತಾಪ್ (ಆಶ್ಚರ್ಯದಿಂದ, ಅವಳ ಕಡೆಗೆ ತಿರುಗಿ ಕತ್ತಲೆಯಲ್ಲಿ ಕಂಡ ನಕ್ಷತ್ರದಂತೆ ನೋಡುತ್ತಾ) ಇಡೀ ಊರೇ ಬ್ರಿಟಿಷರ ಹೆಸರೇಳಿದರೆ ಬಿಸಿಲಿಗೆ ಒಣಗಿದ ಎಲೆಯಂತೆ ನಡುಗುತ್ತದೆ. ಯಾರು ನೀನು? ಕಾರ್ಗತ್ತಲೆಯ ಆಕಾಶದಲ್ಲಿ ಒಂಟಿಯಾಗಿ ಹೊಳೆಯುವ ನಕ್ಷತ್ರದಂತಿರುವ ಇಷ್ಟು ಧೈರ್ಯದ ಗಣಿಯಾಗಿರುವ ನಿನ್ನ ಹೆಸರೇನು? ಎಂದು ಕೇಳಿದಾಗ, ಗಾಯಿತ್ರಿ (ಸ್ವಾಭಿಮಾನದ ನಗುವಿನೊಂದಿಗೆ): ನನ್ನ ಹೆಸರು ಗಾಯಿತ್ರಿ. ಈ ಮಣ್ಣಿನ ಮಗಳು, ನಿಮ್ಮ ಹೋರಾಟಕ್ಕೆ ಸಾಕ್ಷಿಯಾಗಲಿರುವ ಒಡನಾಡಿ. ಎಂದಳು. ಗಾಯಿತ್ರಿ... ನಿನ್ನ ಕಣ್ಣುಗಳಲ್ಲಿ ದುರ್ಗಾದೇವಿಯ ತೇಜಸ್ಸಿದೆ. ಈ ಕ್ರಾಂತಿಯ ಕತ್ತಲೆಯಲ್ಲಿ ನೀನು ನನಗೆ ಸಿಕ್ಕ ಬೆಳಕಿನ ಕಿರಣ ಎಂದನು. ಆಗ ಪ್ರತಾಪ್ ನ ಕಣ್ಣುಗಳಲ್ಲಿ ಗಾಯಿತ್ರಿಯ ಧೈರ್ಯವನ್ನು ನೋಡಿ ಒಂದು ಅಪೂರ್ವ ಗೌರವ ಮೂಡಿತು. ಬಂಡೆಯ ಬಿರುಕಿನಲ್ಲಿ ಸುಂದರ ಹೂವೊಂದು ಅರಳುವಂತೆ, ಆ ಕ್ರಾಂತಿಯ ಕತ್ತಲೆಯಲ್ಲಿ ಅವರಿಬ್ಬರ ಪ್ರೇಮದ ಮೊದಲ ಮೊಳಕೆ ಒಡೆಯಿತು. ಸುಮಾರು ಹೊತ್ತು ಒಬ್ಬರನ್ನೊಬ್ಬರು ದೀಪದ ಬೆಳಕಿನಲ್ಲಿ ನೋಡುತ್ತಾ ಕುಳಿತರು. ಆಮೇಲೆ ಪ್ರತಾಪನಿಗೆ ಕುಡಿಯಲು ಬೆಲ್ಲದ ಬಿಸಿನೀರನ್ನು ಕೊಟ್ಟಳು. ಸ್ವಲ್ಪ ಹೊತ್ತಿನ ನಂತರ ತಗೋ ಸ್ವಲ್ಪ ಊಟ ಮಾಡು. ನೀನು ಊಟಮಾಡಿ ಎಷ್ಟು ದಿನಗಳಾಯಿತೋ? ಎಂದಳು. ಬೇಡ ಗಾಯಿತ್ರಿ ಎಂದನು. ಪ್ರತಾಪ್ ಊಟವನ್ನು ಬೇಡ ಎನ್ನಬೇಡ, ನೀನು ಊಟ ಮಾಡಿದರೆ ಮಾತ್ರ ಸ್ವಾತಂತ್ರ್ಯಕ್ಕಾಗಿ ಆ ಬಿಳಿ ಕೋತಿಗಳ ವಿರುದ್ಧ ಹೋರಾಡಬಹುದು ಎಂದಳು ಗಾಯಿತ್ರಿ.

**★ಪ್ರೀತಿಯ ಸೌಧ ಹೇಗೆ ಕಟ್ಟಲಿ?★:** ದಿನಗಳು ಶರತ್ಕಾಲದ ಮೋಡಗಳಂತೆ ಮೆಲ್ಲನೆ ಉರುಳಿದವು. ಪ್ರತಾಪ್ ಹೊರಗಿನ ಪ್ರಪಂಚಕ್ಕೆ ಮೃತ್ಯುವಿನಂತಿದ್ದರೂ, ಗಾಯಿತ್ರಿಯ ಮನೆಯ ರಹಸ್ಯ ಕೋಣೆಯಲ್ಲಿ ಸುಪ್ತ ಜ್ವಾಲಾಮುಖಿಯಂತೆ ಅಡಗಿದ್ದನು. ದಿನಗಳು ಕಳೆದಂತೆ ಇಬ್ಬರ ನಡುವೆ ಮಾತುಗಳು ಕಡಿಮೆಯಾದವು; ಆದರೆ ಅವರ ಹೃದಯಗಳ ಮಿಡಿತ ಹೆಚ್ಚಾಯಿತು. ವಸಂತ ಕಾಲದಲ್ಲಿ ತಂಗಾಳಿ ಮತ್ತು ಎಲೆಗಳು ಮಾತಾಡಿಕೊಳ್ಳುವಂತೆ, ಅವರಿಬ್ಬರ ನಡುವೆ ಮಾತಿಗಿಂತ ಮೌನವೇ ಮಧುರವಾದ ಪ್ರೇಮಕಾವ್ಯವನ್ನು ಬರೆಯತೊಡಗಿತು. ಒಂದು ಸಂಜೆ, ಮಬ್ಬುಗತ್ತಲೆ ಆವರಿಸುತ್ತಿದ್ದಾಗ ಪ್ರತಾಪ್ ತೈಲದೀಪದ ಬೆಳಕಿನಲ್ಲಿ ತನ್ನ ಪಿಸ್ತೂಲನ್ನು ಸ್ವಚ್ಛಗೊಳಿಸುತ್ತಿದ್ದನು. ಲೋಹದ ಆ ಆಯುಧದ ತಣ್ಣನೆಯ ಸ್ಪರ್ಶಕ್ಕೂ ಅವನ ಕಣ್ಣಲ್ಲಿದ್ದ ತೀಕ್ಷ್ಣತೆಗೂ ಹೋಲಿಕೆಯಿತ್ತು. ಅದನ್ನು ನೋಡುತ್ತಾ ಗಾಯಿತ್ರಿ ಕಾಫಿ ಲೋಟ ಹಿಡಿದು ಅಲ್ಲಿಗೆ ಬಂದು, (ಅವನತ್ತ ವಾತ್ಸಲ್ಯದಿಂದ ನೋಡುತ್ತಾ): ಯಾವಾಗಲೂ ಕೈಯಲ್ಲಿ ಈ ಮೃತ್ಯುವಿನ ಸಂಕೇತವಾದ ಮಾರಕಾಸ್ತ್ರವನ್ನೇ ಹಿಡಿದಿರುತ್ತೀರಲ್ಲ? ನಿಮಗಂತೂ ಒಂದು ಸುಂದರ ಸಂಸಾರ, ಕೋಗಿಲೆಯ ಹಾಡಿನಂತಹ ಪ್ರೀತಿ, ಸುಂದರ ಭವಿಷ್ಯದ ಕನಸುಗಳು ಯಾವುದೂ ಇಲ್ವಾ? ಎಂದಳು. ಅದಕ್ಕೆ ಪ್ರತಾಪ್ (ನಗುವನ್ನು ಬೀರುತ್ತಾ, ಕಿಟಕಿಯಿಂದ ಆಕಾಶದತ್ತ ನೋಡಿ): ಕನಸುಗಳಿವೆ ಗಾಯಿತ್ರಿ, ಗಗನದಷ್ಟೇ ವಿಶಾಲವಾದ ಕನಸುಗಳಿವೆ. ಆದರೆ ನನ್ನ ವೈಯಕ್ತಿಕ ಕನಸುಗಳೆಲ್ಲವೂ ಈ ದೇಶದ ಸ್ವಾತಂತ್ರ್ಯ ಎಂಬ ಮಹಾಸಾಗರದಲ್ಲಿ ಲೀನವಾಗಿವೆ. ಇಡೀ ದೇಶವೇ ಗುಲಾಮಗಿರಿಯೆಂಬ ಕಬ್ಬಿಣದ ಸರಪಳಿಯಲ್ಲಿ ಸಿಲುಕಿ ನಲುಗುತ್ತಿರುವಾಗ, ನಾನು ಮಾತ್ರ ಪ್ರೀತಿಯ ಗಾಜಿನ ಸೌಧವನ್ನು ಹೇಗೆ ಕಟ್ಟಲಿ ಗಾಯಿತ್ರಿ, ನೀನೇ ಹೇಳು? ಎಂದನು. ಆಗ ಗಾಯಿತ್ರಿ (ಅವನ ಹತ್ತಿರ ನಡೆದು ಬಂದು, ತನ್ನ ಕಾಂತಿಯುತ ಕಣ್ಣುಗಳನ್ನು ಅವನ ಕಣ್ಣುಗಳೊಂದಿಗೆ ಮಿಲನಗೊಳಿಸುತ್ತಾ): ಒಂದು ವೇಳೆ... ಆ ಬಿರುಗಾಳಿಯ ಹಾದಿಯಲ್ಲೂ, ನಿಮ್ಮ ಹೆಜ್ಜೆಗೆ ಹೆಜ್ಜೆ ಇಟ್ಟು, ಆ ಪ್ರೀತಿಯ ಸೌಧವನ್ನು ನಿಮ್ಮೊಂದಿಗೆ ಕಟ್ಟಲು ಯಾರಾದರೂ ಸಿದ್ಧರಿದ್ದರೆ? ಆ ಕೂಡಲೇ ಪ್ರತಾಪ್ ಚಕಿತನಾಗಿ ಅವಳ ಕಣ್ಣುಗಳನ್ನು ನೇರವಾಗಿ ನೋಡಿದನು. ಅದರಲ್ಲಿ ದೇಶಪ್ರೇಮದ ತೇಜಸ್ಸಿನೊಂದಿಗೆ, ಸೂರ್ಯನ ಕಿರಣಕ್ಕೆ ಕರಗುವ ಹಿಮದಂತಹ ತೀವ್ರವಾದ ಪ್ರೀತಿ ಎದ್ದು ಕಾಣುತ್ತಿತ್ತು. ಪ್ರತಾಪ್ (ಭಾವೋದ್ವೇಗದಿಂದ ಗಾಯಿತ್ರಿಯ ಮೃದುವಾದ ಕೈಗಳನ್ನು ತನ್ನ ಬಲವಾದ ಕೈಗಳಲ್ಲಿ ಹಿಡಿದು): ಗಾಯಿತ್ರಿ ನನ್ನ ಹಾದಿ ಕೆಂಡದ ಹಾದಿ, ಮುಳ್ಳಿನ ಹಾಸಿಗೆ. ನಾಳೆ ಮುಂಜಾನೆಯ ಸೂರ್ಯನನ್ನು ನಾನು ನೋಡುತ್ತೇನೋ ಇಲ್ಲವೋ ತಿಳಿಯದು. ನನ್ನನ್ನು ಪ್ರೀತಿಸಿದರೆ ನಿನಗೆ ಮುತ್ತುಗಳ ಬದಲು ಕಣ್ಣೀರಿನ ಹನಿಗಳು ಮಾತ್ರ ಸಿಗಬಹುದು. ಎಂದಾಗ ಗಾಯಿತ್ರಿ (ಅವನ ಕೈಗಳನ್ನು ಮತ್ತಷ್ಟು ಗಟ್ಟಿಯಾಗಿ ಒತ್ತಿ ಹಿಡಿಯುತ್ತಾ): ನಿಮ್ಮ ಸಿದ್ಧಾಂತದ ಹಾದಿಯಲ್ಲಿ ಬರುವ ಕೆಂಡದ ತುಂಡುಗಳು ನನಗೂ ಮಲ್ಲಿಗೆಯ ಹೂವಿನಂತೆ. ನಿಮ್ಮ ಪ್ರೀತಿಯಲ್ಲಿ ಸಿಗುವ ಕಣ್ಣೀರು, ಜಗದ ಇನ್ಯಾವ ಸಿಂಹಾಸನದ ಸುಖಕ್ಕಿಂತಲೂ ಮಿಗಿಲಾದದ್ದು. ಎಂದಳು. ಪ್ರತಾಪ್ : (ಭಾವಪರವಶನಾಗಿ) ಇದು ಕೇವಲ ಪ್ರೀತಿಯಲ್ಲ ಗಾಯಿತ್ರಿ, ನಮ್ಮ ದೇಶದ ಬಲಿಪೀಠದ ಮುಂದೆ ನಿಂತು ಮಾಡಿಕೊಂಡ ಹಿಮಾಲಯದಷ್ಟೇ ಪವಿತ್ರವಾದ ಒಪ್ಪಂದ! ಎಂದನು. ಅಂದು ಕಾರ್ಗತ್ತಲೆಯಲ್ಲಿ, ಎರಡು ಹೃದಯಗಳು ಒಂದಕ್ಕೊಂದು ಬೆಸೆದುಕೊಂಡವು. ಆದರೆ ಅದು ಕೇವಲ ಲೌಕಿಕ ಪ್ರೇಮದ ಬಂಧನವಾಗಿರಲಿಲ್ಲ; ನಿಜಕ್ಕೂ ದೇಶದ ಬಲಿಪೀಠದ ಮುಂದೆ ನಿಂತು ಮಾಡಿಕೊಂಡ ಪವಿತ್ರ ಒಪ್ಪಂದವೇ ಆಗಿತ್ತು.

**★ದೇಶವೇ ಮೊದಲು★:** ಬ್ರಿಟಿಷ್ ಅಧಿಕಾರಿ ಮೇಜರ್ ಜಾನ್ಸನ್‌ಗೆ ಪ್ರತಾಪ್ ಇರುವ ಜಾಗದ ಸುಳಿವು ಸಿಕ್ಕಿತ್ತು. ಬೇಟೆಗಾರರು ಕಾಡಿನ ಸಿಂಹವನ್ನು ಮುತ್ತಿಗೆ ಹಾಕುವಂತೆ, ಬ್ರಿಟಿಷ್ ಸೈನಿಕರ ಹಿಂಡು ಇಡೀ ಗ್ರಾಮವನ್ನು ಸುತ್ತುವರೆದಿತ್ತು. ಆಗ ಗಾಯಿತ್ರಿ (ಆತಂಕದಿಂದ ಕಿಟಕಿಯ ಹೊರಗೆ ನೋಡಿ, ಧ್ವನಿ ತಗ್ಗಿಸಿ) ಪ್ರತಾಪ್, ಹೊರಗೆ ಪರಿಸ್ಥಿತಿ ತಣ್ಣಗಿದ್ದರೂ ಜ್ವಾಲಾಮುಖಿ ಸ್ಫೋಟಿಸುವ ಮುನ್ನಿನ ಭೀಕರ ಮೌನದಂತಿದೆ. ಮೇಜರ್ ಜಾನ್ಸನ್ ಇಡೀ ಹಳ್ಳಿಗೆ ಜೇಡನಂತೆ ಬಲೆ ಹೆಣೆದಿದ್ದಾನೆ. ಇವತ್ತೇ ನೀವು ಹೊರಡಬೇಕಾ? ಎಂದು ಕೇಳಿದಳು. ಪ್ರತಾಪ್ (ತನ್ನ ಕಟಾರಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾ) ಹೌದು ಗಾಯಿತ್ರಿ, ಬೇಟೆಗಾರನ ಬಲೆಗೆ ಹೆದರಿ ಸಿಂಹ ಗುಹೆಯಲ್ಲೇ ಅಡಗಿ ಕುಳಿತರೆ ಕಾಡಿಗೆ ಗೌರವವಿಲ್ಲ. ಇಂದು ರಾತ್ರಿ ಬ್ರಿಟಿಷರ ಮುಖ್ಯ ಶಸ್ತ್ರಾಗಾರವನ್ನು ಧ್ವಂಸ ಮಾಡದಿದ್ದರೆ, ನಮ್ಮ ಇಷ್ಟು ದಿನದ ಹೋರಾಟ ಬೂದಿಯಲ್ಲಿ ಹೋಮ ಮಾಡಿದಂತೆ ನಿರರ್ಥಕವಾಗುತ್ತದೆ. ಸೈನಿಕರು ಮೈ ಮರೆತಿರುವ ಈ ಕತ್ತಲೆಯೇ ನಮ್ಮ ಪಾಲಿನ ಕವಚ ಎಂದನು. ಆಗ ಗಾಯಿತ್ರಿ (ಅವನ ಎದುರು ಬಂದು ನಿಂತು, ಕಣ್ಣುಗಳಲ್ಲಿ ತೀವ್ರವಾದ ಹಠದೊಂದಿಗೆ) ನೀವು ಕತ್ತಲೆಯನ್ನು ಕವಚ ಅಂದುಕೊಂಡರೆ, ಅದು ಹಾವನ್ನು ಹಗ್ಗ ಅಂದುಕೊಂಡಂತೆ ಪ್ರತಾಪ್! ಮೇಜರ್ ಜಾನ್ಸನ್ ಒಬ್ಬ ಧೂರ್ತ. ನಿಮ್ಮನ್ನು ಹಿಡಿಯಲು ಅವನು ಇಡೀ ಹಳ್ಳಿಯನ್ನೇ ಸುಡಲು ಸಿದ್ಧನಿದ್ದಾನೆ. ಈ ಹೋರಾಟದಲ್ಲಿ ನಿಮ್ಮ ಪ್ರಾಣಕ್ಕೆ ಏನಾದರೂ ಆದರೆ... ನನ್ನ ಬದುಕು ಹಾಯಿ ಹರಿದ ನಾವೆಯಂತೆ ದಿಕ್ಕಾಪಾಲಾಗುತ್ತದೆ. ಆಗ ಪ್ರತಾಪ್ (ಅವಳ ಹೆಗಲ ಮೇಲೆ ಕೈಯಿಟ್ಟು, ಕಣ್ಣುಗಳಲ್ಲಿ ನಂಬಿಕೆಯ ಬೆಳಕು ಬೀರುತ್ತಾ) ಗಾಯಿತ್ರಿ, ಪ್ರಾಣ ಅನ್ನೋದು ಬೆಳಗಿನ ಜಾವದ ಮಂಜಿನ ಹನಿಯಂತೆ, ಯಾವಾಗಲಾದರೂ ಕರಗಲೇಬೇಕು. ಆದರೆ ಆ ಹನಿ ಈ ಮಾತೃಭೂಮಿಯ ಮಣ್ಣಿಗೆ ಆಸರೆಯಾಗಿ ಕರಗಿದರೆ ಅದಕ್ಕೊಂದು ಸಾರ್ಥಕತೆ ಇರುತ್ತದೆ. ನನ್ನ ಪ್ರೀತಿ ನಿನ್ನನ್ನು ದುರ್ಬಲಳನ್ನಾಗಿ ಮಾಡಬಾರದು, ಬದಲಿಗೆ ಶತ್ರುವಿನ ಎದೆಯಲ್ಲಿ ಸಿಡಿಲಿನಂತೆ ಮೃತ್ಯುವಿನ ಭಯ ಹುಟ್ಟಿಸಬೇಕು ಎಂದನು. ಕೂಡಲೇ ಗಾಯಿತ್ರಿ (ತಟ್ಟನೆ ಅವನ ಕೈಯಲ್ಲಿದ್ದ ಬಂದೂಕನ್ನು ಕಿತ್ತುಕೊಂಡು, ತಾನೇ ಹಿಡಿದು ನಿಲ್ಲುತ್ತಾ) ನನ್ನನ್ನು ನೀವು ಹೆದರುಪುಕ್ಕಲಿ ಅಂದುಕೊಂಡಿರಾ? ನಿಮ್ಮ ಪ್ರೀತಿ ನನ್ನ ಎದೆಯಲ್ಲಿ ಕಣ್ಣೀರನ್ನು ತುಂಬಿಲ್ಲ, ಬದಲಿಗೆ ಕಬ್ಬಿಣವನ್ನು ಕರಗಿಸುವ ಕೆಂಡವನ್ನು ತುಂಬಿದೆ! ನಾನು ನಿಮ್ಮ ಹಿಂದೆ ಕಣ್ಣೀರು ಹಾಕುತ್ತಾ ಕೂರುವ ಹೆಣ್ಣಲ್ಲ. ನಾನೂ ಯುದ್ಧರಂಗಕ್ಕೆ ಬರುತ್ತೇನೆ. ನಿಮ್ಮ ಜೊತೆ ಬದುಕದಿದ್ದರೂ, ಶತ್ರುಗಳ ರಕ್ತದ ಕೆರೆಯಲ್ಲಿ ನಿಮ್ಮ ಜೊತೆಯೇ ಸೂರ್ಯಾಸ್ತದಂತೆ ಮಣ್ಣಾಗುತ್ತೇನೆ! ಎಂದಳು.

**★ಅಂತಿಮ ದಾಳಿಗೆ ಸಿದ್ಧತೆ★:** ಈ ನಡುವೆ ಪ್ರತಾಪ್ ಮತ್ತು ಅವನ ಕ್ರಾಂತಿಕಾರಿ ಪಡೆ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷ್ ಕಚೇರಿಯ ಮೇಲೆ ಅಂತಿಮ ದಾಳಿ ಮಾಡಲು ಅವರು ಕಾಡ್ಗಿಚ್ಚಿನಂತೆ ಸಿದ್ಧರಾಗುತ್ತಿದ್ದರು. . ಆದರೆ ಪ್ರತಾಪ್ ಮತ್ತು ಗಾಯಿತ್ರಿಯವರ ಎದೆಯಲ್ಲಿ ಭಾವನೆಗಳ ಸುಂಟರಗಾಳಿ ಎದ್ದಿತ್ತು. ಪ್ರತಾಪ್ (ತನ್ನ ಹೆಗಲಿಗೆ ಬಂದೂಕನ್ನು ಸಿಕ್ಕಿಸಿಕೊಳ್ಳುತ್ತಾ): ಗಾಯಿತ್ರಿ, ಕೇಳು. ಇವತ್ತು ನಮ್ಮ ಪಾಲಿಗೆ ಕತ್ತಲೆಯ ಕೊನೆಯ ರಾತ್ರಿಯಾಗಬಹುದು ಅಥವಾ ಹೊಸ ಮುಂಜಾನೆಯ ಆರಂಭವೂ ಆಗಬಹುದು. ನನಗೆ ಎಲ್ಲಕ್ಕಿಂತ ಹೆಚ್ಚಾಗಿ ದೇಶವೇ ಮೊದಲು. ನನ್ನ ಜನರ ಸ್ವಾತಂತ್ರ್ಯ ರಕ್ಷಣೆಗಾಗಿ ನಾನು ಹೊರಡಬೇಕಿದೆ. ಮೇಜರ್ ಜಾನ್ಸನ್ ತನ್ನ ಸೇನೆಯೊಂದಿಗೆ ಹಸಿದ ತೋಳಗಳಂತೆ ಕಾಯುತ್ತಿದ್ದಾನೆ. ನಾನು ಹೋಗಲೇಬೇಕು. ಎಂದನು. ಆಗ ಗಾಯಿತ್ರಿ (ಅವನ ಕೈಯನ್ನು ಗಟ್ಟಿಯಾಗಿ ಹಿಡಿದು, ಕಣ್ಣಲ್ಲಿ ಸಾಗರದಂತೆ ನೀರು ತುಂಬಿದ್ದರೂ ಧ್ವನಿಯಲ್ಲಿ ಸಿಡಿಲಿನ ದೃಢತೆಯೊಂದಿಗೆ): ನನ್ನನ್ನು ಇಲ್ಲಿಯೇ ಬಿಟ್ಟು ಹೋಗಬೇಡಿ ಪ್ರತಾಪ್! ಹೆಣ್ಣು ಕೇವಲ ಮನೆಯ ದೀಪವಲ್ಲ, ಸಮಯ ಬಂದರೆ ಶತ್ರುವನ್ನು ಸುಡುವ ಜ್ವಾಲೆಯೂ ಆಗಬಲ್ಲಳು. ನನಗೂ ಬಂದೂಕು ಹಿಡಿಯಲು ಬರುತ್ತದೆ, ನಿಮ್ಮ ನೆರಳಾಗಿ ನಾನೂ ಬರುತ್ತೇನೆ! ಎಂದಳು. ಪ್ರತಾಪ್ (ಅವಳ ಹೆಗಲ ಮೇಲೆ ಕೈಯಿಟ್ಟು, ಮೃದುವಾಗಿ ನಗುತ್ತಾ, ಭಾವಪರವಶನಾಗಿ ಅವಳ ಕೈಯಿಂದ ಬಂದೂಕನ್ನು ನಿಧಾನವಾಗಿ ಹಿಂತೆಗೆದುಕೊಂಡು): ನನಗೆ ಗೊತ್ತು ಗಾಯಿತ್ರಿ, ನೀನು ಶಕ್ತಿ ಸ್ವರೂಪಿಣಿ. ಚಂಡಮಾರುತಕ್ಕೆ ಹೆದರದ ಬಂಡೆಯಂತಿದೆ ನಿನ್ನ ಧೈರ್ಯ ಗಾಯಿತ್ರಿ. ಆದರೆ ರಣರಂಗದಲ್ಲಿ ಹೋರಾಡುವವರಿಗಿಂತ, ಕ್ರಾಂತಿಯ ಸಿದ್ಧಾಂತವನ್ನು ಜೀವಂತವಾಗಿಡುವವರು ಮುಖ್ಯ. ನಾನು ಯುದ್ಧದ ಮುಂಚೂಣಿಯಲ್ಲಿದ್ದರೆ, ನೀನು ಈ ಕ್ರಾಂತಿಯ ಬೆನ್ನೆಲುಬಿನಂತೆ ಇರಬೇಕು. ಒಂದು ವೇಳೆ ಯುದ್ಧರಂಗಕ್ಕೆ ಇಬ್ಬರೂ ಧುಮುಕಿದರೆ, ಈ ಕ್ರಾಂತಿಯ ಜ್ವಾಲೆಯನ್ನು ಮುಂದಕ್ಕೆ ಕೊಂಡೊಯ್ಯುವವರು ಯಾರು? ಈ ದೀಪ ಆರಿ ಹೋದರೆ, ಮುಂದಿನ ಪೀಳಿಗೆಗೆ ಬೆಳಕು ತೋರಲು ನೀನು ಬದುಕಿರಬೇಕು. ಈ ಧ್ವಜವನ್ನು ಹಿಡಿದು ಮುಂದಿನ ಪೀಳಿಗೆಯನ್ನು ಮುನ್ನಡೆಸುವ ಮಹಾಶಕ್ತಿ ನೀನಾಗಬೇಕು. ಇದು ನನ್ನ ಮೇಲಿನ ಪ್ರೀತಿಗಾಗಿ ನೀನು ಮಾಡಬೇಕಾದ ತ್ಯಾಗ ಗಾಯಿತ್ರಿ. ಅದೂ ಅಲ್ಲದೇ ನನ್ನ ಪ್ರೀತಿಯ ಸಾಕ್ಷಿಯಾಗಿ ನೀನು ಜೀವಂತ ಇರಬೇಕು ಗಾಯಿತ್ರಿ. ಎಂದನು. ಆಗ ಗಾಯಿತ್ರಿ (ಕಣ್ಣೀರು ಕೆನ್ನೆಯ ಮೇಲೆ ಜಾರುತ್ತಿದ್ದರೂ ಮುಖದಲ್ಲಿ ಹೆಮ್ಮೆಯ ನಗು ಬೀರುತ್ತಾ) ನಿಮ್ಮ ಆಜ್ಞೆ ನನ್ನ ಪಾಲಿಗೆ ಕಲ್ಲಿನ ಮೇಲಿನ ಬರಹದಂತೆ ಶಾಶ್ವತ. ನಿಮ್ಮ ಮಾತುಗಳು ನನ್ನ ಎದೆಯನ್ನು ಸೀಳುತ್ತಿವೆ. ಆದರೆ ದೇಶದ ಸ್ವಾತಂತ್ರ್ಯಕ್ಕಾಗಿ ನನ್ನ ಹೃದಯದ ನೋವನ್ನು ನಾನು ನುಂಗಿಕೊಳ್ಳುತ್ತೇನೆ. ಈ ಪ್ರೀತಿ ಕೇವಲ ಈ ಜನ್ಮದ್ದಲ್ಲ ಪ್ರತಾಪ್. ಎಂದಳು. ಕೂಡಲೇ ತಟ್ಟೆಯಲ್ಲಿದ್ದ ಕುಂಕುಮವನ್ನು ತೆಗೆದು, ಅವನ ಹಣೆಗೆ ವಿಜಯದ ತಿಲಕವನ್ನಿಟ್ಟಳು. ಅವಳ ಕೈಗಳು ನಡುಗುತ್ತಿದ್ದವು, ಆದರೆ ದೃಷ್ಟಿ ನೆಟ್ಟಗಿತ್ತು. ಗಾಯಿತ್ರಿ (ಗದ್ಗದಿತ ಕಂಠದಿಂದ, ಅವನ ಕಣ್ಣುಗಳನ್ನೇ ನೋಡುತ್ತಾ): ಹೋಗಿ ಬಾ ನನ್ನ ವೀರ. ರಣರಂಗದಲ್ಲಿ ನಿಮ್ಮ ಬಂದೂಕಿನ ಪ್ರತಿ ಧ್ವನಿಯೂ ನನ್ನ ಹೃದಯದ ಮಿಡಿತ ಎಂದು ತಿಳಿಯಿರಿ. ನಿಮ್ಮ ವಿಜಯದ ವಾರ್ತೆಗಾಗಿ ಈ ಗಾಯಿತ್ರಿ ದೇವಿ ಕಾಯುತ್ತಿರುತ್ತಾಳೆ. ಒಂದು ವೇಳೆ ಯಮನೂ ನಿಮ್ಮನ್ನು ತಡೆದರೆ, ಅವನನ್ನು ಸೀಳಿ ಬನ್ನಿ. ಇಲ್ಲವಾದರೆ, ಮುಂದಿನ ಜನ್ಮದಲ್ಲೂ ಈ ಭಾರತಾಂಬೆಯ ಮಡಿಲಲ್ಲೇ ನಿಮ್ಮ ಕೈ ಹಿಡಿಯಲು ನಾನು ಕಾಯುತ್ತಿರುತ್ತೇನೆ. ಎಂದಳು ಗಾಯಿತ್ರಿ. ಆಗ ಪ್ರತಾಪ್ (ಅವಳನ್ನು ಕೊನೆಯ ಬಾರಿ ಬಿಗಿಯಾಗಿ ಆಲಂಗಿಸಿ, ಭಾವಪರವಶನಾಗಿ): ನಿನ್ನ ಪ್ರೀತಿಯೇ ನನಗೆ ರಕ್ಷಾಕವಚ ಗಾಯಿತ್ರಿ. ಬ್ರಿಟಿಷರ ಯಾವ ಗುಂಡೂ ನನ್ನ ದೇಶಪ್ರೇಮವನ್ನು ಕೊಲ್ಲಲು ಸಾಧ್ಯವಿಲ್ಲ. ವಿದಾಯ! ಎಂದು ಹೇಳಿ ಪ್ರತಾಪ್ ಬಿರುಗಾಳಿಯಂತೆ ಹೊರನಡೆದನು. ಗಾಯಿತ್ರಿ ಆ ಕತ್ತಲ ಕೋಣೆಯಲ್ಲಿ, ತೈಲದೀಪದ ಬೆಳಕಿನಲ್ಲಿ ಕರಗುವ ಮೇಣದ ಬತ್ತಿಯಂತೆ ನಿಂತು ಕಣ್ಣೀರು ಸುರಿಸುತ್ತಿದ್ದರೂ, ಅವಳ ಮನಸ್ಸು ಮಾತ್ರ ಅವನ ರಕ್ಷಣೆಗೆ ದೇವರನ್ನು ಪ್ರಾರ್ಥಿಸುತ್ತಿತ್ತು.




**★ಅಮರ ಪ್ರೇಮ★:** ಆ ರಾತ್ರಿ ಇಡೀ ನಗರವೇ ನಡುಗುವಂತೆ ಭೀಕರ ಗುಂಡಿನ ಚಕಮಕಿ ನಡೆಯಿತು. ಪ್ರತಾಪ್ ಮತ್ತು ಅವನ ಸಂಗಡಿಗರು ಬ್ರಿಟಿಷ್ ಸೈನ್ಯದ ವಿರುದ್ಧ ಗುಡುಗು ಸಿಡಿಲುಗಳಂತೆ ಮುಗಿಬಿದ್ದರು. ಹೆಡೆಮುರಿ ಕಟ್ಟಿದ ಹಾವಿನಂತೆ ಮೇಜರ್ ಜಾನ್ಸನ್ ಎದುರಾದಾಗ, ಪ್ರತಾಪ್ ಹಾರಿಬಂದು ಸಿಂಹದಂತೆ ಘರ್ಜಿಸಿದನು. ಪ್ರತಾಪನ ಬಂದೂಕಿನಿಂದ ಹೊರಟ ಬುಲೆಟ್ ಮೇಜರ್ ಜಾನ್ಸನ್‌ನ ಎದೆಯನ್ನು ಸೀಳಿತು. ಕ್ರೂರ ಅಧಿಕಾರಿ ನೆಲಕ್ಕೆ ಬಿದ್ದನು. ಆದರೆ, ಅದೇ ಕ್ಷಣದಲ್ಲಿ ಹತ್ತಾರು ಬ್ರಿಟಿಷ್ ಸೈನಿಕರ ಗುಂಡುಗಳು ಪ್ರತಾಪ್‌ನ ಎದೆಯನ್ನು ಝುರಝುರನೆ ಇರಿದವು. ಹೆಮ್ಮರ ಉರುಳುವಂತೆ ಪ್ರತಾಪ್ ರಕ್ತದ ಮಡುವಿನಲ್ಲಿ ನೆಲಕ್ಕೆ ಬಿದ್ದನು. ಬೆಳಗಿನ ಜಾವ, ಪೂರ್ವ ದಿಕ್ಕಿನಲ್ಲಿ ಸೂರ್ಯನು ರಕ್ತದ ಬಣ್ಣದ ಕಿರಣಗಳನ್ನು ಚೆಲ್ಲುತ್ತಾ ಮೂಡುತ್ತಿದ್ದನು. ರಣರಂಗದ ದಾರುಣ ದೃಶ್ಯವನ್ನು ನೋಡಿ ಓಡಿ ಬಂದ ಗಾಯಿತ್ರಿ, ರಕ್ತದ ಮಡುವಿನಲ್ಲಿ ಬಿದ್ದಿದ್ದ ಪ್ರತಾಪ್‌ನ ಬಳಿಗೆ ಧಾವಿಸಿದಳು. ಒಡೆದ ಮುತ್ತಿನಂತಿದ್ದ ಅವನ ದೇಹವನ್ನು ಎತ್ತಿ ತನ್ನ ಮಡಿಲಲ್ಲಿ ಇಟ್ಟುಕೊಂಡಳು. ಗಾಯಿತ್ರಿ (ಕಿರುಚುತ್ತಾ, ಕಣ್ಣೀರು ಅವನ ಮುಖದ ಮೇಲಿದ್ದ ರಕ್ತವನ್ನು ತೊಳೆಯುತ್ತಿರುವಾಗ) ಪ್ರತಾಪ್... ಕಣ್ಣು ಬಿಡಿ! ನೋಡಿ, ಸೂರ್ಯ ಮೂಡುತ್ತಿದ್ದಾನೆ. ನಿಮ್ಮ ಕನಸಿನ ಮುಂಜಾವು ಬಂದಿದೆ. ನಮ್ಮ ಜನ ಗೆದ್ದಿದ್ದಾರೆ, ಬ್ರಿಟಿಷರು ಸೋತು ಓಡುತ್ತಿದ್ದಾರೆ! ನನ್ನನ್ನು ಒಂಟಿ ಮಾಡಿ ಹೋಗಬೇಡಿ... ಎನ್ನುತ್ತಾ ಗೊಳೋ ಎಂದು ಅಳುತ್ತಿದ್ದಳು. ಪ್ರತಾಪ್ (ಬಹಳ ಕಷ್ಟದಿಂದ ಕಣ್ಣುಗಳನ್ನು ಬಿಟ್ಟು, ಒಣಗಿದ ತುಟಿಗಳ ಮೇಲೆ ದೇವತಾ ಮನುಷ್ಯನಂತಹ ಮುಗುಳ್ನಗೆ ಬೀರುತ್ತಾ): ಗಾಯಿತ್ರಿ.. ಅಳಬೇಡ... ನಿನ್ನ ಕಣ್ಣೀರು ನನ್ನ ಆತ್ಮಕ್ಕೆ ನೋವು ತರುತ್ತದೆ. ಇಗೋ ನೋಡು, ಗುಲಾಮಗಿರಿಯ ಸರಪಳಿಗಳು ಕಳಚಿ ಬೀಳುತ್ತಿವೆ. ನನ್ನ ದೇಶಕ್ಕೆ ಸ್ವಾತಂತ್ರ್ಯ ಸಿಗುವ ಮುನ್ಸೂಚನೆ ನನಗೆ ಕಾಣಿಸುತ್ತಿದೆ... ಎಂದನು. ಆಗ ಗಾಯಿತ್ರಿ (ಅವನ ಕೈಗಳನ್ನು ತನ್ನ ಎದೆಗೆ ಹತ್ತಿರವಾಗಿ ಹಿಡಿದುಕೊಂಡು) ನಿಮಗಿಲ್ಲದ ಸ್ವಾತಂತ್ರ್ಯ ನನಗೆ ಶೂನ್ಯ ಪ್ರತಾಪ್. ನನ್ನನ್ನು ನಿಮ್ಮೊಂದಿಗೆ ಕರೆದುಕೊಂಡು ಹೋಗಿ! ಪ್ರತಾಪ್ (ಕೊನೆಯುಸಿರಿನ ತಡಬಡಿಕೆಯಲ್ಲಿ, ಅವಳ ಮುಖವನ್ನು ಮೃದುವಾಗಿ ಮುಟ್ಟುತ್ತಾ): ಇಲ್ಲ ಗಾಯಿತ್ರಿ... ನಿನ್ನ ಪ್ರೀತಿ ನನ್ನನ್ನು ಸಾವಿನಲ್ಲೂ ಅಮರನನ್ನಾಗಿ ಮಾಡಿದೆ. ನಾನು ಸಾಯುತ್ತಿಲ್ಲ, ಈ ದೇಶದ ಮಣ್ಣಿನಲ್ಲಿ, ಗಾಳಿಯಲ್ಲಿ, ನೀನು ಕೂಗುವ ಜಯಘೋಷದಲ್ಲಿ ನಾನು ಬದುಕಿರುತ್ತೇನೆ. ಭಾರತ ಮಾತಾ ಕಿ ಜೈ... ಎನ್ನುತ್ತಾ ಅವನು ಕಣ್ಣುಗಳನ್ನು ಮುಚ್ಚಿದನು. ಅವನ ಪ್ರಾಣ ಪಕ್ಷಿ ಈ ನಶ್ವರ ಲೋಕವನ್ನು ಬಿಟ್ಟು ಹಾರಿಹೋಯಿತು.

ಕ್ಷಣಕಾಲ ಇಡೀ ಜಗತ್ತೇ ಸ್ತಬ್ಧವಾದಂತಾಯಿತು. ಆದರೆ ಗಾಯಿತ್ರಿ ಅಳಲಿಲ್ಲ. ಅವಳ ಕಣ್ಣುಗಳಲ್ಲಿದ್ದ ದುಃಖದ ಮಂಜು ಕರಗಿ, ಬ್ರಿಟಿಷರ ವಿರುದ್ಧದ ಧಗಧಗಿಸುವ ಆಕ್ರೋಶದ ಜ್ವಾಲೆಯಾಗಿ ಮಾರ್ಪಟ್ಟಿತು. ಅವಳು ಪ್ರತಾಪ್ ನ ಸಡಿಲವಾದ ಕೈಯಲ್ಲಿದ್ದ, ರಕ್ತದಿಂದ ಒದ್ದೆಯಾಗಿದ್ದ ತ್ರಿವರ್ಣ ಧ್ವಜವನ್ನು ಗಟ್ಟಿಯಾಗಿ ಕೈಗೆತ್ತಿಕೊಂಡಳು. ರಣರಂಗದ ಮಧ್ಯದಲ್ಲಿ ಎದ್ದು ನಿಂತು, ಆಕಾಶವನ್ನು ಸೀಳುವಂತಹ ಸಿಂಹ ಘರ್ಜನೆಯೊಂದಿಗೆ ಧ್ವಜವನ್ನು ಎತ್ತಿ ಹಿಡಿದು ಘೋಷಣೆ ಕೂಗಿದಳು: ಇನ್ಕಿಲಾಬ್ ಜಿಂದಾಬಾದ್! ಬೋಲೋ, ಭಾರತ್ ಮಾತಾ ಕಿ ಜೈ! ರಣರಂಗಕ್ಕೆ ಬಂದಿದ್ದ ಹಲವು ಸ್ತ್ರೀಯರು ಅವಳೊಂದಿಗೆ ಜೈಕಾರ ಹಾಕಿದರು.

– **ಕೆ.ಎನ್. ಚಿದಾನಂದ** (ನಾನಂಚಿ) ಹಾಸನ




## ಕತ್ತಲೆಯ ಕಾನನದಿಂದ ಬದುಕಿನ ಬೆಳಕಿನಡೆಗೆ

ಇಂದಿನ ಯುವ ಪೀಳಿಗೆ ಅಪಾರ ಶಕ್ತಿ, ಕನಸು ಮತ್ತು ಸಾಮರ್ಥ್ಯದ ಪ್ರತೀಕವಾಗಿದೆ. ಆದರೆ ಇದೇ ಯುವಶಕ್ತಿ ಕೆಲವೊಮ್ಮೆ ತಪ್ಪು ದಾರಿಯ ಆಕರ್ಷಣೆಗೆ ಒಳಗಾಗಿ ಮಾದಕ ವಸ್ತುಗಳ ವ್ಯಸನದ ಜಾಲದಲ್ಲಿ ಸಿಲುಕುತ್ತಿರುವುದು ಸಮಾಜದ ದೊಡ್ಡ ಚಿಂತೆಯ ವಿಷಯವಾಗಿದೆ. ಜೀವನವನ್ನು ಉಜ್ವಲಗೊಳಿಸಬೇಕಾದ ವಯಸ್ಸಿನಲ್ಲಿ ಕೆಲವರು ಕ್ಷಣಿಕ ಸುಖದ ಭ್ರಮೆಯಲ್ಲಿ ತಮ್ಮ ಭವಿಷ್ಯವನ್ನೇ ಕತ್ತಲೆಯ ಕಾನನಕ್ಕೆ ತಳ್ಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಯುವಕರು ಕತ್ತಲೆಯ ಕಾನನದಿಂದ ಹೊರಬಂದು ಬದುಕಿನ ಬೆಳಕಿನಡೆಗೆ ಸಾಗಬೇಕಾದ ಅಗತ್ಯ ಇಂದು ಹಿಂದೆಂದಿಗಿಂತ ಹೆಚ್ಚಾಗಿದೆ.

ಈ ಲೇಖನದ ಶೀರ್ಷಿಕೆಯಲ್ಲಿ ಕತ್ತಲೆ ಎಂದರೆ ಮಾದಕ ವಸ್ತುಗಳ ಆಕರ್ಷಣೆ, ಕಾನನ ಎಂದರೆ ವ್ಯಸನದ ಜಟಿಲ ಜಾಲ, ಬೆಳಕು ಎಂದರೆ ವ್ಯಸನ ಮುಕ್ತವಾಗಲು ದೊರೆಯುವ ಸಹಾಯ ಮತ್ತು ಅರಿವು, ಹಾಗೂ ಬದುಕು ಎಂದರೆ ಆರೋಗ್ಯಕರ, ಸಂತೋಷದಾಯಕ ಮತ್ತು ವ್ಯಸನಮುಕ್ತ ಜೀವನ.

ಮಾದಕ ವಸ್ತುಗಳ ವ್ಯಸನವು ಮೊದಲಿಗೆ ಒಂದು ಸಣ್ಣ ಕುತೂಹಲವಾಗಿ ಆರಂಭವಾಗುತ್ತದೆ. ಒಮ್ಮೆ ಪ್ರಯತ್ನಿಸಿದರೆ ಏನು ಆಗುತ್ತದೆ?, ಸ್ನೇಹಿತರು ಎಲ್ಲರೂ ಬಳಸುತ್ತಾರೆ, ಒತ್ತಡ ಕಡಿಮೆಯಾಗುತ್ತದೆ ಎಂಬಂತಹ ಭ್ರಮೆಗಳು ಯುವ ಮನಸ್ಸನ್ನು ಸೆಳೆಯುತ್ತವೆ. ಆದರೆ ಆ ಒಂದು ಹೆಜ್ಜೆಯೇ ಮುಂದೆ ದೊಡ್ಡ ಕಂದಕಕ್ಕೆ ಕರೆದೊಯ್ಯಬಹುದು. ಆರಂಭದಲ್ಲಿ ಅದು ಮನರಂಜನೆಯಂತೆ ಕಂಡರೂ, ನಿಧಾನವಾಗಿ ಅದು ವ್ಯಕ್ತಿಯ ದೇಹ, ಮನಸ್ಸು, ಕುಟುಂಬ ಮತ್ತು ಸಮಾಜದ ಮೇಲೆ ಭೀಕರ ಪರಿಣಾಮ ಬೀರುತ್ತದೆ.

ವ್ಯಸನವನ್ನು ಕಾನನಕ್ಕೆ ಹೋಲಿಸುವುದು ಸೂಕ್ತ. ಏಕೆಂದರೆ ಕಾಡಿನೊಳಗೆ ಒಮ್ಮೆ ದಾರಿ ತಪ್ಪಿದರೆ ಹೊರಬರುವುದು ಕಷ್ಟವಾಗುವಂತೆ, ವ್ಯಸನದ ಜಾಲಕ್ಕೆ ಸಿಲುಕಿದ ನಂತರ ಅದರಿಂದ ಹೊರಬರುವುದು ಸುಲಭವಲ್ಲ. ವ್ಯಸನ ವ್ಯಕ್ತಿಯ ಆತ್ಮವಿಶ್ವಾಸವನ್ನು ಕಸಿದುಕೊಳ್ಳುತ್ತದೆ. ಅವನ ಕನಸುಗಳನ್ನು ನಾಶಮಾಡುತ್ತದೆ. ಕುಟುಂಬದ ಪ್ರೀತಿ ಮತ್ತು ವಿಶ್ವಾಸವನ್ನು ಕುಗ್ಗಿಸುತ್ತದೆ. ವಿದ್ಯಾಭ್ಯಾಸ, ಉದ್ಯೋಗ, ಆರೋಗ್ಯ ಎಲ್ಲವೂ ಒಂದೊಂದಾಗಿ ಕೈತಪ್ಪಲು ಆರಂಭಿಸುತ್ತವೆ.

ಯುವಕರ ಜೀವನದಲ್ಲಿ ಸ್ನೇಹಿತರ ಪ್ರಭಾವ ಬಹಳ ದೊಡ್ಡದು. ಒಳ್ಳೆಯ ಸ್ನೇಹಿತರು ಜೀವನವನ್ನು ಎತ್ತರಕ್ಕೆ ಕೊಂಡೊಯ್ಯುತ್ತಾರೆ; ಕೆಟ್ಟ ಸ್ನೇಹಿತರು ಜೀವನವನ್ನು ಕತ್ತಲೆಯೊಳಗೆ ತಳ್ಳುತ್ತಾರೆ. ಆದ್ದರಿಂದ ಸ್ನೇಹಿತರ ಆಯ್ಕೆಯಲ್ಲಿ ಜಾಗರೂಕತೆ ಅತ್ಯಗತ್ಯ. ನಿಜವಾದ ಸ್ನೇಹಿತ ಎಂದರೆ ತಪ್ಪು ದಾರಿಯಲ್ಲಿ ಕರೆದುಕೊಂಡು ಹೋಗುವವನು ಅಲ್ಲ; ಸರಿಯಾದ ದಾರಿಯಲ್ಲಿ ನಡೆಯಲು ಪ್ರೇರೇಪಿಸುವವನು.

ಇಂದಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು, ಸಿನಿಮಾಗಳು ಮತ್ತು ಕೆಲವು ಮಾಧ್ಯಮಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ಆಕರ್ಷಕವಾಗಿ ಚಿತ್ರಿಸುವ ಪ್ರಯತ್ನಗಳು ಕಂಡುಬರುತ್ತವೆ. ಆದರೆ ಅವುಗಳ ಹಿಂದಿನ ವಾಸ್ತವಿಕತೆ ತುಂಬಾ ಭಯಾನಕವಾಗಿದೆ. ವ್ಯಸನದಿಂದ ಅನೇಕ ಯುವಕರು ತಮ್ಮ ಆರೋಗ್ಯ ಕಳೆದುಕೊಳ್ಳುತ್ತಾರೆ, ಕುಟುಂಬದಿಂದ ದೂರವಾಗುತ್ತಾರೆ, ಕೆಲವರು ಅಪರಾಧ ಚಟುವಟಿಕೆಗಳಲ್ಲೂ ಸಿಲುಕುತ್ತಾರೆ. ಕ್ಷಣಿಕ ಸಂತೋಷಕ್ಕಾಗಿ ಆರಂಭವಾದ ಚಟುವಟಿಕೆ ಜೀವನಪೂರ್ತಿ ನೋವನ್ನು ನೀಡಬಹುದು.

ಆದರೆ ಯಾವುದೇ ಕತ್ತಲೆ ಶಾಶ್ವತವಲ್ಲ. ಒಂದು ಸಣ್ಣ ದೀಪವೂ ಸಾವಿರಾರು ವರ್ಷಗಳ ಕತ್ತಲೆಯನ್ನು ದೂರ ಮಾಡಬಲ್ಲದು. ಹಾಗೆಯೇ ವ್ಯಸನದ ಕತ್ತಲೆಯಿಂದ ಹೊರಬರಲು ಸಹಾಯ, ಪ್ರೀತಿ, ಮಾರ್ಗದರ್ಶನ ಮತ್ತು ದೃಢ ಸಂಕಲ್ಪ ಎಂಬ ಬೆಳಕು ಅಗತ್ಯ. ಕುಟುಂಬದ ಬೆಂಬಲ, ಶಿಕ್ಷಕರ ಮಾರ್ಗದರ್ಶನ, ಸ್ನೇಹಿತರ ಸಹಕಾರ ಹಾಗೂ ವೈದ್ಯಕೀಯ ಸಲಹೆ ವ್ಯಸನದಿಂದ ಹೊರಬರಲು ಪ್ರಮುಖ ಪಾತ್ರ ವಹಿಸುತ್ತವೆ. ವ್ಯಸನದಿಂದ ಹೊರಬರುವ ಮೊದಲ ಹೆಜ್ಜೆ ತನ್ನ ಸಮಸ್ಯೆಯನ್ನು ಒಪ್ಪಿಕೊಳ್ಳುವುದಾಗಿದೆ. ನನಗೆ ವ್ಯಸನವಾಗಿದೆ, ನಾನು ಇದರಿಂದ ಹೊರಬರಬೇಕು ಎಂಬ ನಿರ್ಧಾರವೇ ಪುನರ್ಜನ್ಮದ ಆರಂಭ. ನಂತರ ಕ್ರಮೇಣ ಆರೋಗ್ಯಕರ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಕ್ರೀಡೆ, ಯೋಗ, ಧ್ಯಾನ, ಪುಸ್ತಕ ಓದುವಿಕೆ, ಸಂಗೀತ, ಸಮಾಜ ಸೇವೆ ಮುಂತಾದ ಚಟುವಟಿಕೆಗಳು ಮನಸ್ಸಿಗೆ ಹೊಸ ದಿಕ್ಕನ್ನು ನೀಡುತ್ತವೆ.

ಯುವಕರು ತಮ್ಮ ಜೀವನದ ಗುರಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಳ್ಳಬೇಕು. ಗುರಿ ಇರುವ ವ್ಯಕ್ತಿ ದಾರಿ ತಪ್ಪುವ ಸಾಧ್ಯತೆ ಕಡಿಮೆ. ವೈದ್ಯರಾಗುವುದು, ಶಿಕ್ಷಕರಾಗುವುದು, ವಿಜ್ಞಾನಿಯಾಗುವುದು, ಉದ್ಯಮಿಯಾಗುವುದು ಅಥವಾ ಸಮಾಜ ಸೇವಕರಾಗುವುದು ಯಾವುದೇ ಕನಸು ಇರಲಿ, ಅದನ್ನು ಸಾಧಿಸಲು ಆರೋಗ್ಯಕರ ದೇಹ ಮತ್ತು ದೃಢ ಮನಸ್ಸು ಅಗತ್ಯ. ವ್ಯಸನವು ಈ ಎರಡನ್ನೂ ಕಸಿದುಕೊಳ್ಳುತ್ತದೆ.

ನಮ್ಮ ದೇಶದ ಭವಿಷ್ಯ ಯುವಕರ ಕೈಯಲ್ಲಿದೆ. ಪ್ರತಿಯೊಬ್ಬ ಯುವಕ ವ್ಯಸನದಿಂದ ದೂರ ಉಳಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಆರೋಗ್ಯವಂತ ಯುವಕರು ಆರೋಗ್ಯವಂತ ಕುಟುಂಬವನ್ನು ನಿರ್ಮಿಸುತ್ತಾರೆ; ಆರೋಗ್ಯವಂತ ಕುಟುಂಬಗಳು ಆರೋಗ್ಯವಂತ ಸಮಾಜವನ್ನು ನಿರ್ಮಿಸುತ್ತವೆ; ಆರೋಗ್ಯವಂತ ಸಮಾಜವೇ ಬಲಿಷ್ಠ ರಾಷ್ಟ್ರದ ಅಡಿಪಾಯವಾಗುತ್ತದೆ.

ಇಂದು ನಾವು ಪ್ರತಿಯೊಬ್ಬರೂ ಒಂದು ಸಂಕಲ್ಪ ಮಾಡಬೇಕಾಗಿದೆ. ನಾನು ವ್ಯಸನದಿಂದ ದೂರ ಇರುತ್ತೇನೆ. ನನ್ನ ಸ್ನೇಹಿತರನ್ನೂ ವ್ಯಸನದಿಂದ ದೂರ ಇಡಲು ಪ್ರಯತ್ನಿಸುತ್ತೇನೆ. ವ್ಯಸನದ ವಿರುದ್ಧ ಜಾಗೃತಿ ಮೂಡಿಸುತ್ತೇನೆ. ಈ ಸಂಕಲ್ಪವೇ ನಾಳೆಯ ಭಾರತವನ್ನು ಮತ್ತಷ್ಟು ಶಕ್ತಿಶಾಲಿ ಮತ್ತು ಸುಂದರ ರಾಷ್ಟ್ರವನ್ನಾಗಿ ರೂಪಿಸಲಿದೆ.

ಕತ್ತಲೆಯ ಕಾನನ ಎಷ್ಟೇ ಭಯಾನಕವಾಗಿರಲಿ, ಬೆಳಕಿನ ಒಂದು ಕಿರಣ ಸಾಕು ದಾರಿಯನ್ನು ತೋರಿಸಲು. ವ್ಯಸನದ ಕತ್ತಲೆಯಿಂದ ಹೊರಬಂದಾಗ ಮಾತ್ರ ನಿಜವಾದ ಬದುಕಿನ ಸೌಂದರ್ಯ ಕಾಣಿಸುತ್ತದೆ. ಜೀವನವು ಅಮೂಲ್ಯವಾದ ಉಡುಗೊರೆ. ಅದನ್ನು ವ್ಯಸನದ ವಿಷಕ್ಕೆ ಬಲಿಕೊಡದೆ, ಜ್ಞಾನ, ಆರೋಗ್ಯ, ಪ್ರೀತಿ ಮತ್ತು ಸೇವೆಯ ಬೆಳಕಿನಲ್ಲಿ ಅರಳಿಸೋಣ.

ವ್ಯಸನವು ಜೀವನದ ದಾರಿಯನ್ನು ಮಸುಕಾಗಿಸುತ್ತದೆ; ಆದರೆ ಸಂಕಲ್ಪದ ಬೆಳಕು ಅದನ್ನು ಮತ್ತೆ ಪ್ರಕಾಶಮಾನಗೊಳಿಸುತ್ತದೆ.

ವ್ಯಸನ ಮುಕ್ತ ಯುವಕರು ದೇಶದ ಸಂಪತ್ತು; ವ್ಯಸನ ಮುಕ್ತ ಭಾರತ ನಮ್ಮೆಲ್ಲರ ಕನಸು ಮತ್ತು ಕರ್ತವ್ಯ.

ವ್ಯಸನ ಮುಕ್ತ ಭಾರತ ಎಂಬ ಸಂದೇಶವನ್ನು ಯುವಜನರಿಗೆ ತಲುಪಿಸುವಂತೆ ಈ ಲೇಖನವನ್ನು ರಚಿಸಲಾಗಿದೆ.

– **ಶ್ರೀ ಸುಬ್ರಹ್ಮಣ್ಯ** ನಾಯಕ್

## ತಾಯಂದಿರ ಆರೋಗ್ಯಕ್ಕಾಗಿ ಮಿಡಿದ ಮಾತೃ ಹೃದಯಿ ರಾಣಿ ನಿಲೂಫರ್

ಒಂದೊಳ್ಳೆ ಮಾತು

ಆಕೆಯ ಹೆಸರು ನಿಲೂಫರ್. ಒಟ್ಟೋಮನ್ ರಾಜ ಕುಮಾರಿ, ರಾಜಕೀಯ ಒಪ್ಪಂದದ ಭಾಗವಾಗಿ 1931ರಲ್ಲಿ ಹೈದರಾಬಾದ್‌ನ ನಿಜಾಮನ ಎರಡನೇ ಮಗನಾದ ಮುಜಾಜ್ಜಮ್ ಜಾ ಅವರನ್ನು ವಿವಾಹವಾಗಿ ಭಾರತಕ್ಕೆ ಬಂದರು. ಅರಮನೆಯ ವೈಭವ, ಪತಿಯ ಅಪಾರ ಪ್ರೀತಿ ಎಲ್ಲವೂ ಇತ್ತಾದರೂ, ಸಾಂಪ್ರದಾಯಿಕ ಸಮಾಜ ಅವರಿಂದ ಒಂದು ವಾರಸುದಾರನನ್ನು ಬಯಸುತ್ತಿತ್ತು. ಆದರೆ, ದುರದೃಷ್ಟವಶಾತ್ ತಾನು ಎಂದಿಗೂ ತಾಯಿಯಾಗಲಾರೆ ಎಂಬ ಕಟು ಸತ್ಯ ತಿಳಿದಾಗ ನಿಲೂಫರ್ ಅಕ್ಷರಶಃ ಮುರಿದುಬಿದ್ದರು.

ಆದರೆ, ಕಮಲದ ಹೂವು ಕೆಸರಿನಲ್ಲಿದ್ದರೂ ಮೇಲಕ್ಕೆದ್ದು ಸೌಂದರ್ಯ ಪಸರಿಸುವಂತೆ, ನಿಲೂಫರ್ ಕಣ್ಣೀರನ್ನು ಒರೆಸಿಕೊಂಡು ಸಮಾಜಮುಖಿ ಕೆಲಸಗಳ ಕಡೆಗೆ ತನ್ನ ಇಡೀ ಬದುಕನ್ನು ಮುಡುಪಾಗಿಟ್ಟರು.

ಅರಮನೆಯ ನಾಲ್ಕು ಗೋಡೆಗಳ ಮಧ್ಯೆ ಐಷಾರಾಮಿ ಜೀವನ ನಡೆಸುವ ಬದಲು ನಿಲೂಫರ್ ಹೈದರಾಬಾದ್‌ನ ಸಾಮಾನ್ಯ ಜನರ ಕಷ್ಟಗಳಿಗೆ ಸ್ಪಂದಿಸಲು ಶುರು ಮಾಡಿದರು. ಒಂದು ದಿನ ಆಕೆಯ ಅರಮನೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರ್ತಿ ಹೆರಿಗೆಯ ಸಮಯದಲ್ಲಿ ಸೂಕ್ತ ವೈದ್ಯಕೀಯ ಸೌಲಭ್ಯ ಸಿಗದೆ, ತೀವ್ರ ರಕ್ತಸ್ರಾವದಿಂದ ಮೃತಪಟ್ಟಳು. ಹುಟ್ಟಿದ ಮಗುವೂ ಬದುಕುಳಿಯಲಿಲ್ಲ.

ಈ ಘಟನೆ ನಿಲೂಫರ್ ಅವರ ಹೃದಯವನ್ನು ಹಿಂಡಿಹಾಕಿತು. ತನಗೆ ಮಗುವಾಗಲಿಲ್ಲ ಎಂಬ ನೋವಿಗಿಂತ, ಬಡತನ ಮತ್ತು ಸೂಕ್ತ ಆಸ್ಪತ್ರೆಗಳಿಲ್ಲದೆ ನೂರಾರು ತಾಯಂದಿರು ಹಾಗೂ ಶಿಶುಗಳು ಮರಣ ಹೊಂದುತ್ತಿರುವುದು ಆಕೆಯನ್ನು ಹೆಚ್ಚು ಕಾಡಿತು. ಅಂದೇ ಆಕೆ ಒಂದು ಪಣ ತೊಟ್ಟರು– ಈ ಸಾಮ್ರಾಜ್ಯದಲ್ಲಿ ಯಾವೊಬ್ಬ ತಾಯಿಯೂ ಹೆರಿಗೆಯ ನೋವಿನಿಂದ ಸಾಯಬಾರದು.

ತನ್ನ ನೋವನ್ನೇ ಶಕ್ತಿಯನ್ನಾಗಿ ಮಾಡಿಕೊಂಡ ರಾಜಕುಮಾರಿ, ಹೈದರಾಬಾದ್‌ನಲ್ಲಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಪ್ರತ್ಯೇಕ ಹಾಗೂ ಅತ್ಯಾಧುನಿಕ ಆಸ್ಪತ್ರೆಯನ್ನು ನಿರ್ಮಿಸಲು ನಿರ್ಧರಿಸಿದರು. ಅದಕ್ಕಾಗಿ ತಮ್ಮ ವೈಯಕ್ತಿಕ ಒಡವೆಗಳು, ಹಣ ಮತ್ತು ರಾಯಲ್ ಪ್ರಭಾವವನ್ನು ಬಳಸಿದರು.

1949ರಲ್ಲಿ ಆಕೆಯ ಕನಸಿನ ಕೂಸಾದ ನಿಲೂಫರ್ ಹಾಸ್ಪಿಟಲ್ ಫಾರ್ ವುಮೆನ್ ಅಂಡ್ ಚಿಲ್ಡ್ರನ್ ತಲೆಯೆತ್ತಿತು. ನಿಲೂಫರ್ ಕೇವಲ ಹಣ ನೀಡಿ ಸುಮ್ಮನಾಗಲಿಲ್ಲ; ಸ್ವತಃ ತಾನೇ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ಬಡ ಹೆಣ್ಣುಮಕ್ಕಳಿಗೆ ಉಚಿತ ಚಿಕಿತ್ಸೆ, ಉನ್ನತ ಗುಣಮಟ್ಟದ ಹೆರಿಗೆ ಸೌಲಭ್ಯ ಸಿಗುವಂತೆ ನೋಡಿಕೊಂಡರು.

ನನಗೆ ಸ್ವಂತ ಮಗುವಿಲ್ಲದಿರಬಹುದು. ಆದರೆ, ನನ್ನ ಆಸ್ಪತ್ರೆಯಲ್ಲಿ ಜನ್ಮ ತಳೆಯುವ ಪ್ರತಿಯೊಂದು ಮಗುವೂ ನನ್ನದೇ ಎಂದು ಆಕೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ನಿಲೂಫರ್ ಕೇವಲ ವೈದ್ಯಕೀಯ ಕ್ಷೇತ್ರಕ್ಕೆ ಸೀಮಿತವಾಗಲಿಲ್ಲ. ಆಕೆ ಭಾರತದ ಸ್ವಾತಂತ್ರ್ಯದ ಕಾಲಘಟ್ಟದಲ್ಲಿ ಸಾಮಾಜಿಕ ಬದಲಾವಣೆಯ ಮುಂಚೂಣಿಯಲ್ಲಿದ್ದರು. ಮಹಿಳಾ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳ ಪರವಾಗಿ ಧ್ವನಿ ಎತ್ತಲು ಆಕೆ ಮಹಾತ್ಮಾ ಗಾಂಧೀಜಿಯವರನ್ನು ಭೇಟಿಯಾದರು. ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ದೇಶದ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವ ಕುರಿತು ಕಳಕಳಿಯ ಪತ್ರಗಳನ್ನು ಬರೆದರು. ಅಂದಿನ ಕಾಲದಲ್ಲಿ ಮುಸ್ಲಿಂ ಮಹಿಳೆಯರು ಪರದೆಯ (ಬುರ್ಖಾ) ಹಿಂದೆ ಇರಬೇಕೆಂಬ ನಿಯಮವಿತ್ತು.



ಆದರೆ, ನಿಲೂಫರ್ ಅದನ್ನು ಮುರಿದು ಹೊರ ಬಂದರು. ಮುಸುಕು ಧರಿಸದೆ ಸಾರ್ವಜನಿಕವಾಗಿ ಓಡಾಡಿದ ಮೊದಲ ರಾಯಲ್ ಮಹಿಳೆ ಆಕೆ. ಹೆಣ್ಣುಮಕ್ಕಳಿಗೆ ಶಿಕ್ಷಣ ಸಿಗಬೇಕು, ಅವರು ಸ್ವಾವಲಂಬಿಗಳಾಗಬೇಕು ಎಂದು ಆಕೆ ನಿರಂತರವಾಗಿ ಶ್ರಮಿಸಿದರು.

ವಾರಸುದಾರನಿಲ್ಲ ಎಂಬ ಕಾರಣಕ್ಕೆ ಪತಿ 1948ರಲ್ಲಿ 2ನೇ ಮದುವೆಯಾದಾಗ, ನಿಲೂಫರ್ ತನ್ನ ಸ್ವಾಭಿಮಾನವನ್ನು ಬಿಟ್ಟು ಕೊಡಲಿಲ್ಲ. ಆಕೆ ಭಾರತವನ್ನು ತೊರೆದು ಯುರೋಪ್‌ಗೆ ಮರಳಿದರೂ, ತಾವು ಹೈದರಾಬಾದ್‌ನಲ್ಲಿ ಬಿತ್ತಿದ ಸೇವೆಯ ಬೀಜವನ್ನು ಮರೆಯಲಿಲ್ಲ. ಫ್ರಾನ್ಸ್ ಮತ್ತು ಅಮೆರಿಕದಲ್ಲಿದ್ದಾಗಲೂ ಅವರು ಅಂತಾರಾಷ್ಟ್ರೀಯ ಚಾರಿಟಿ ಸಂಸ್ಥೆ ಗಳೊಂದಿಗೆ ಸೇರಿ ಹಿಂದುಳಿದ ಮಹಿಳೆಯರ ಕಲ್ಯಾಣಕ್ಕಾಗಿ ನಿಧಿ ಸಂಗ್ರಹಿಸಿದರು.

1989ರಲ್ಲಿ ನಿಲೂಫರ್ ಪ್ಯಾರಿಸ್‌ನಲ್ಲಿ ನಿಧನರಾದರು. ಕೆಲವೊಮ್ಮೆ ಸಮಾಜದಲ್ಲಿ ನಾವು ಅಂದುಕೊಂಡದ್ದನ್ನು ಮಾಡಲು ಹಣಕ್ಕಿಂತ ಇಚ್ಛಾ ಶಕ್ತಿ ಬಹಳ ಮುಖ್ಯವಾಗುತ್ತದೆ. ಮಾಡುವ ಪ್ರತಿ ಕೆಲಸಕ್ಕೂ ನೂರಾರು ಅಡಚಣೆಗಳು ಇದ್ದದ್ದೇ, ಆದರೆ ಅದರ ಆಚೆ ಗಟ್ಟಿಯಾಗಿ ಅಂದುಕೊಂಡದ್ದನ್ನ ಮಾಡುವ ಛಲ ಬೆಳೆಸಿಕೊಂಡಾಗ ಒಳಿತಿನ ದಾರಿಗಳು ಒಂದಲ್ಲ ನೂರಾಗುತ್ತವೆ.

– **ರೂಪಾ** ಗುರುರಾಜ್

# ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ರಾಹುಲ್‌ಗೆ ಪತ್ರ

## ರಿಯಲ್ ಎಸ್ಟೇಟ್ ದಂಧೆಗೆ ಬಿಡಲ್ಲ | ನಿಖಿಲ್ ಕುಮಾರಸ್ವಾಮಿ ಎಚ್ಚರಿಕೆ

• ಪ್ರಜೋದಯ ವರದಿ

**ರಾಮನಗರ:** ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆ ಕೈ ಬಿಡ ಬೇಕೆಂದು ಒತ್ತಾಯಿಸಿ, ಕಾಂಗ್ರೆಸ್ ನಾಯಕ ಹಾಗು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದೇನೆ. ಜೊತೆಗೆ ಯೋಜನಾ ಪ್ರದೇಶದ ರೈತರು ಸಹ ಪತ್ರ ಬರೆದು ಅಂಚೆ ಮೂಲಕ ಕಳಿಸಲಿದ್ದಾರೆಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಹೇಳಿದರು.



ಬಿಡದಿಯ ಅರಳಾಳುಸಂದ್ರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಗ್ರೇಟ್ ನಿಕೋಬಾರ್ ಅಭಿವೃದ್ಧಿ ಯೋಜನೆ ವಿರುದ್ಧ ಗ್ರೀನ್ ಓವರ್ ಗ್ರೀಡ್ (ಹಸಿರಿನ ಮೇಲೆ ದುರಾಸೆ) ಎಂದು ದನಿ ಎತ್ತಿರುವ ರಾಹುಲ್ ಅವರು, ಅರಣ್ಯ ಮತ್ತು ಪರಿಸರ ರಕ್ಷಣೆ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ. ಕರ್ನಾಟಕದಲ್ಲಿ ಅವರದ್ದೇ ಪಕ್ಷದ ಸರ್ಕಾರ ರೈತರ ಫಲವ ತ್ತಾದ ಭೂಮಿಯನ್ನು ಉಪನಗರಕ್ಕೆ ಸ್ವಾಧೀನಪಡಿಸಿಕೊಳ್ಳುತ್ತಿದೆ. ಆ ಬಗ್ಗೆಯೂ ತಮ್ಮ ಸರ್ಕಾರದ ಕಿವಿ ಹಿಂಡಿ ಯೋಜನೆ ಕೈ ಬಿಡುವಂತೆ ಪತ್ರದಲ್ಲಿ ಒತ್ತಾಯಿಸಲಾಗುವುದು ಎಂದರು.

ರಾಹುಲ್ ಅವರಿಗೆ ನಿಜವಾಗಿಯೂ ರೈತರ ಬಗ್ಗೆ ಹಾಗು ಪರಿಸರದ ಬಗ್ಗೆ ಕಾಳಜಿ ಇದ್ದರೆ, ಬಿಡದಿ ಉಪನಗರ ಯೋಜನೆ ಕೈ ಬಿಡುವಂತೆ ತಮ್ಮ ಖಾಸಾ ವ್ಯಕ್ತಿಯಾಗಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕಿವಿಮಾತು ಹೇಳ ಬೇಕು. ಸಾಧ್ಯವಾದರೆ ಒಮ್ಮೆ ಬಿಡದಿಗೆ ಭೇಟಿ ನೀಡಿ, ಇಲ್ಲಿರುವುದು ಬರಡು ಭೂಮಿಯೋ ಅಥವಾ ಫಲವತ್ತಾದ ಭೂಮಿಯೋ ಎಂದು ಪರಿಶೀಲಿಸಬೇಕೆಂದರು.

ತಮ್ಮ ಕ್ಷೇತ್ರದ ಜನರಿಗೆ ಯಾರೂ ತಮ್ಮ ಜಮೀನು ಮಾರಾಟ ಮಾಡಬೇಡಿ, ನಿಮ್ಮ ಭೂಮಿಗೆ ಚಿನ್ನದ ಬೆಲೆ ತಂದು ಕೊಡುವೆ ಎನ್ನುವ ಮೂಲಕ ಡಿ.ಕೆ.ಶಿವಕುಮಾರ್ ಅವರು, ರಾಮ ನಗರ ಮತ್ತು ಹಾರೋಹಳ್ಳಿ ತಾಲ್ಲೂಕು ಜನರ ವಿಷಯದಲ್ಲಿ ಯಾಕೆ ಮಲತಾಯಿ ಧೋರಣೆ ಅನು ಸರಿಸುತ್ತಿದ್ದಾರೆ. ಇಲ್ಲಿರುವವರು ರೈತರ ಲ್ಲವೆ. ಅವರ ಕ್ಷೇತ್ರದವರು ಮಾತ್ರ ರೈತರೇ ಎಂದು ಪ್ರಶ್ನಿಸಿದರು.

**ರಿಯಲ್ ಎಸ್ಟೇಟ್ ದಂಧೆ**

ಸರ್ಕಾರ ಉಪನಗರದ ಹೆಸರಿನಲ್ಲಿ ರೈತರ ಜಮೀನು ಸ್ವಾಧೀನಪಡಿಸಿಕೊಂಡು ರಿಯಲ್ ಎಸ್ಟೇಟ್ ದಂಧೆ ಮಾಡಲು ಹೊರಟಿದೆ. ರೈತರಿಗೆ ಒಂದು ಎಕರೆಗೆ 2.5 ಕೋಟಿ ರೂ. ಪರಿಹಾರ ಕೊಡುವ ಸರ್ಕಾರ, ಮುಂದೆ ಅದನ್ನು ಚದರ ಅಡಿ ಲೆಕ್ಕದಲ್ಲಿ ಬಿಡಿಬಿಡಿಯಾಗಿ ಮಾರಾಟ ಮಾಡಿ ಎಕರೆಗೆ 25 ಕೋಟಿ ರೂ. ಲಾಭ ಪಡೆಯಲಿದೆ. ಯೋಜನೆಯಿಂದ ಸುಮಾರು 33 ಸಾವಿರ ಕೋಟಿ ರೂ. ಲಾಭ ಗಳಿಸಲು ಸರ್ಕಾರ ಮುಂದಾ ಗಿದೆ ಎಂದು ನಿಖಿಲ್ ಆರೋಪಿಸಿದರು.

ಯೋಜನೆಯು ಸರ್ಕಾರಕ್ಕೆ ಹೊರೆಯಾಗಲಿದೆ ಎಂದು ಆರ್ಥಿಕ ಇಲಾಖೆ ಅಭಿಪ್ರಾಯ ಪಟ್ಟರೂ, ತರಾತುರಿಯಲ್ಲಿ ಸಚಿವ ಸಂಪುಟವು ಯೋಜನೆಗೆ ಒಪ್ಪಿಗೆ ಕೊಟ್ಟಿದೆ. ಅನುಷ್ಠಾನಕ್ಕಾಗಿ ಶೇ.87ರಷ್ಟು ಸಾಲವನ್ನು ಹುಡ್ಕೊದಿಂದ ಪಡೆಯಲಾಗುತ್ತಿದೆ. ಅದಕ್ಕಾಗಿ ಬೆಂಗಳೂರು ಮಹಾ ನಗರ ಪ್ರದೇಶಾ ಭಿವೃದ್ಧಿ ಪ್ರಾಧಿಕಾರದ (ಬಿಎಂಆರ್‌ಡಿಎ) ಸಾರ್ವ ಜನಿಕ ಆಸ್ತಿಗಳನ್ನು ಅಡಮಾನ ಇಡಲಾಗುತ್ತಿದೆ.

**ಅನ್ನದಾತರ ಪರ ನಿರಂತರ ಹೋರಾಟ**

ರೈತರ ಪರವಾಗಿ ಕೆಲಸ ಮಾಡುವ ಬದಲು ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಿಯಲ್ ಎಸ್ಟೇಟ್ ದಂಧೆಗೆ ಮುಂದಾಗಿದ್ದಾರೆ. ಜಿಬಿಐಟಿ ಯೋಜನೆಗಾಗಿ 499 ಎಕರೆ ಭೂಸ್ವಾಧೀನ ವಿಚಾರದಲ್ಲಿ ರೈತರೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸ ಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಒತ್ತಾಯಿಸಿದ್ದಾರೆ.
ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೇಕಡಾ 90ಕ್ಕಿಂತ ಹೆಚ್ಚು ಮಂದಿ ರೈತರು ತಮ್ಮ ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಡಲು ತಯಾರಾಗಿಲ್ಲ. ಈ ವಿಷಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ರೈತರ ಜೊತೆ ಒಟ್ಟಾಗಿ ಹೋರಾಟ ನಡೆಸಲಿದೆ ಎಂದರು.

ಇದು ಯಾವ ರೀತಿಯ ಅಭಿವೃದ್ಧಿ ಎಂದು ವಾಗ್ದಾಳಿ ನಡೆಸಿದರು.

ರೈತರ ವಿರೋಧದ ನಡುವೆಯೂ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ ಸರ್ಕಾರ ವನ್ನು ಮಣಿಸಲು ನಮಗೆ ಕಾನೂನಿನ ಅಸ್ತ್ರವಿದೆ. ನಾವು ರೈತರ ಜೊತೆಗಿದ್ದು ಯೋಜನೆ ವಿರುದ್ಧ ತಡೆಯಾಜ್ಞೆ ತರಲು ಕಾನೂನು ಹೋರಾಟ ಮಾಡುತ್ತೇವೆಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

# ಅಕ್ಷರದಿಂದ ಕಲಿತ ಜ್ಞಾನ ಎಂದಿಗೂ ನಾಶವಾಗಲ್ಲ

• ಪ್ರಜೋದಯ ವರದಿ

**ಬೇಲೂರು:** ಯಾವುದಕ್ಕೆ ನಾಶವಿಲ್ಲವೋ ಅದೇ ಅಕ್ಷರ. ವ್ಯಕ್ತಿ ನಾಶವಾಗಬಹುದು, ಆದರೆ ಆತ ಅಕ್ಷರದ ಮುಖಾಂತರ ಗಳಿಸುವ ಜ್ಞಾನ ಎಂದಿಗೂ ನಾಶವಾಗುವುದಿಲ್ಲ. ಪೋಷಕರು ಮಕ್ಕಳ ಆಸಕ್ತಿ ಅರಿತು ಕಲಿಯಲು ಮುಕ್ತ ಅವಕಾಶ ಕಲ್ಪಿಸ ಬೇಕೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಚ್.ಎಲ್. ಮಲ್ಲೇಶಗೌಡ ಅವರು ಅಭಿಪ್ರಾಯಪಟ್ಟರು.



ತಾಲ್ಲೂಕಿನ ಹಳ್ಳಿಡಿ ಗ್ರಾಮದ ಶಿಲಾಶಾಸನ ಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಸ್ಕಾಲರ್ಸ್ ಶಾಲೆಯ 15ನೇ ವರ್ಷದ ಅಕ್ಷರಾ ಭ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜಗತ್ತಿಗೆ ಜ್ಞಾನ ಮತ್ತು ವಿವೇಕವನ್ನು ನೀಡಿದ ಶ್ರೇಷ್ಠ ಭಾಷೆ ಕನ್ನಡ. ಬರವಣಿಗೆಯನ್ನು ರೂಪಿಸಿ ಕೊಳ್ಳುವ ಭಾಷೆಗಳಲ್ಲಿ ಶ್ರೇಷ್ಠ ತತ್ವವನ್ನು ಹೊಂದಿರುವ ಕನ್ನಡ ಭಾಷೆ ಮೊದಲು ಅರಳಿದ ಐತಿಹಾಸಿಕ ಸ್ಥಳವಿದು. ಇಂತಹ ಪುಣ್ಯ ಸ್ಥಳದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸು ತ್ತಿರುವ ಪೋಷಕರೇ ಧನ್ಯರು. ವಿದ್ಯಾರ್ಥಿಗಳು ಕೇವಲ ಶಾಲೆಯಿಂದ ಮಾತ್ರವಲ್ಲದೆ, ಶಿಕ್ಷಕರು, ಪೋಷಕರು ಹಾಗು ತಮ್ಮ ಸುತ್ತಲಿನ ಪರಿಸರ ದಿಂದಲೂ ಜ್ಞಾನದ ಅರಿವನ್ನು ಪಡೆಯುತ್ತಾರೆ. ಹೀಗಾಗಿ ಅವರಿಗೆ ಉತ್ತಮ ಮಾರ್ಗದರ್ಶನ ನೀಡುವ ಕೆಲಸವಾಗಬೇಕೆಂದು ಹೇಳಿದರು.

ಶಾಲೆಯ ಆಡಳಿತಾಧಿಕಾರಿ ಡಾ.ಹೆಚ್.ಎನ್.ಚಂದ್ರಶೇಖರ್ ಅವರು ಮಾತನಾಡಿ, ಎಲ್ಲಾ ಮಕ್ಕಳ ನಾಲಿಗೆಯಲ್ಲಿ ಸದಾ ಸರಸ್ವತಿಯು ನಲಿದಾಡುವಂತಾಗಲಿ ಎಂದು ಶುಭ ಕೋರಿದರು.

**85 ವಿದ್ಯಾರ್ಥಿಗಳಿಗೆ ಅಕ್ಷರ ದೀಕ್ಷೆ**

ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಣ ಪದ್ಧತಿಗೆ ತನ್ನದೇ ಆದ ಅರ್ಥಪೂರ್ಣ ಸಂಸ್ಕಾರ ಹಾಗು ಸುಂದರ ಚೌಕಟ್ಟಿದೆ. ಗುರು-ಶಿಷ್ಯರ ನಡುವಿನ ಅವಿನಾಭಾವ ಸಂಬಂಧಕ್ಕೆ ಪ್ರೀತಿ ಮತ್ತು ಭಕ್ತಿಯ ಬಂಧವಿದೆ. ಇಂತಹ ವಿದ್ಯಾಭ್ಯಾಸವನ್ನು ಮಂಗಳ ಮುಹೂರ್ತ ದಲ್ಲಿ ಆರಂಭಿಸುವ ಪವಿತ್ರ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಸ್ಕಾಲರ್ಸ್ ಶಾಲೆಗೆ ಹೊಸದಾಗಿ ದಾಖಲಾದ 85 ವಿದ್ಯಾರ್ಥಿಗಳಿಗೆ ಅತಿಥಿಗಳಿಂದ ಅಕ್ಷರಾಭ್ಯಾಸ ಮಾಡಿಸ ಲಾಯಿತು. ಅದಕ್ಕೂ ಮೊದಲು ಶಾರದಾಂಬೆಯನ್ನು ಸ್ಮರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಶಾಲೆಯ ಆಡಳಿತ ಮಂಡಳಿ ಕಾರ್ಯದರ್ಶಿ ಮಮತಾ ಚಂದ್ರಶೇಖರ್, ಶಿಕ್ಷಕರು, ಬೋಧಕೇತರ ಸಿಬ್ಬಂದಿ ಹಾಜರಿದ್ದರು.

# ಗಾಯತ್ರಿ ಸಹಕಾರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ



• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಕೋಟೆಯ ಭೀಮಾಚಾರ್ಯರ ಬೀದಿ ಗಾಯತ್ರಿ ವಿವಿಧೋದ್ದೇಶ ಸಹಕಾರ ಸಂಘದ ಐದು ವರ್ಷಗಳ ಅವಧಿಗೆ ನೂತನ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲಾಗಿದೆ.

ಸಂಘದ ಅಧ್ಯಕ್ಷರಾಗಿ ಬಿ.ಎಸ್. ಮುರಳಿ ಹಾಗು ಉಪಾಧ್ಯಕ್ಷರಾಗಿ ಬಿ. ಮೀರಾ ಅರಸ್ ಆಯ್ಕೆಯಾಗಿದ್ದಾರೆ. ನೂತನ ಆಡಳಿತ ಮಂಡಳಿಯ ಆಯ್ಕೆಯ ನಂತರ ಸಂಘದ ಕಚೇರಿ ಯಲ್ಲಿ ಅಭಿನಂದನಾ ಕಾರ್ಯಕ್ರಮ ನಡೆಯಿತು.

ನೂತನ ಅಧ್ಯಕ್ಷ ಬಿ.ಎಸ್.ಮುರಳಿ ಅವರು ಮಾತನಾಡಿ, ಸಂಘದ ಅಭಿ ವೃದ್ಧಿ, ಸದಸ್ಯರ ಆರ್ಥಿಕ ಸಬಲೀಕರಣ ಹಾಗು ಗುಣಮಟ್ಟದ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಆಡಳಿತ ಮಂಡ ಳಿಯ ಎಲ್ಲಾ ನಿರ್ದೇಶಕರೊಂದಿಗೆ ಸಮನ್ವಯದಿಂದ ಕಾರ್ಯ ನಿರ್ವಹಿಸು ತ್ತೇನೆಂದರು.

ಸಹಕಾರ ಸಂಘವನ್ನು ಇನ್ನಷ್ಟು ಪ್ರಗತಿಪರವಾಗಿ ಬೆಳೆಸುವ ಉದ್ದೇಶ ದಿಂದ ಹೊಸ ಯೋಜನೆ ಗಳನ್ನು ರೂಪಿಸಿ, ಸದಸ್ಯರಿಗೆ ಅನುಕೂಲವಾ ಗುವ ಕಾರ್ಯಕ್ರಮ ಜಾರಿಗೊಳಿಸಲು ಆದ್ಯತೆ ನೀಡಲಾಗುವುದು. ಪಾರ ದರ್ಶಕ ಆಡಳಿತ, ಸದಸ್ಯರ ಸಮಸ್ಯೆ ಗಳಿಗೆ ತ್ವರಿತ ಸ್ಪಂದನೆ ಹಾಗು ಜನಸ್ನೇಹಿ ಸೇವೆಗಳ ಮೂಲಕ ಸಂಘದ ವಿಶ್ವಾ ಸಾರ್ಹತೆಯನ್ನು ಹೆಚ್ಚಿಸಲಾಗುವು ದೆಂದು ಹೇಳಿದರು.

ಸಂಘದ ನಿರ್ದೇಶಕರಾಗಿ ಹೆಚ್. ಎಸ್.ರಮೇಶ್, ಬಿ.ಕೆ.ಕುಮಾರ ಸ್ವಾಮಿ, ಟಿ.ಸಿ.ಶಶಿಕುಮಾರ್, ಹೆಚ್. ಎಸ್.ಕೇಶವಮೂರ್ತಿ, ಕೆ.ಎಸ್.ರಾಘ ವೇಂದ್ರ, ಬಿ.ಎಸ್.ಮಂಜುನಾಥ್, ವಾದಿರಾಜ್, ಟಿ.ಎ.ಶ್ರೀವತ್ಸ ಹಾಗು ಕೆ.ಎಂ.ನವರತ್ನಕುಮಾರಿ ಆಯ್ಕೆಯಾ ಗಿದ್ದಾರೆ.

ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಎಸ್. ನಾಗಭೂಷಣ್ ಉಪಸ್ಥಿತರಿದ್ದರು.

# ಹೊಯ್ಸಳ ವಿದ್ಯುತ್ ಉಪಕರಣಗಳ ಕಾರ್ಮಿಕರ ಸಂಘ ಮಾದರಿ

• ಪ್ರಜೋದಯ ವರದಿ

**ಬೇಲೂರು:** ಸಂಘಟನೆಯ ಒಗ್ಗಟ್ಟು, ಪ್ರಾಮಾಣಿಕ ಸೇವೆ ಹಾಗು ಸದಸ್ಯರ ನಿರಂತರ ಸಹಕಾರದಿಂದ ಹೊಯ್ಸಳ ವಿದ್ಯುತ್ ಉಪಕರಣಗಳ ರಿಪೇರಿ ದಾರರ ಕಾರ್ಮಿಕರ ಸಂಘವು ರಾಜ್ಯ ದಲ್ಲೇ ಮಾದರಿಯಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಶಿಕುಮಾರ್ ಉಪ್ಪಾರ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.




ಪಟ್ಟಣದಲ್ಲಿ ಆಯೋಜಿಸಿದ್ದ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘಟನೆಯೇ ಕಾರ್ಮಿಕರ ಶಕ್ತಿಯಾಗಿದ್ದು, ಸದಸ್ಯರ ಹಿತರಕ್ಷಣೆಗೆ ಸಂಘವು ಇನ್ನಷ್ಟು ಬೆಳೆಯಬೇಕಿದೆ. ಬೇಲೂರು ಘಟಕವು ಆರೋಗ್ಯ ಶಿಬಿರ ಸೇರಿ ಹಲವು ಜನಪರ ಕಾರ್ಯಕ್ರಮ ಗಳನ್ನು ಯಶಸ್ವಿಯಾಗಿ ಹಮ್ಮಿಕೊಂಡಿದೆ. ಸಂಘದ ಆದಾಯ-ವೆಚ್ಚದ ವಿವರಗಳನ್ನು ಪಾರದ ರ್ಶಕವಾಗಿ ಮಂಡಿಸಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರು.

ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಬಿ.ಬಿ.ಶಿವರಾಜು ಅವರು ಮಾತನಾಡಿ, ಹೊಯ್ಸಳ ವಿದ್ಯುತ್ ಕಾರ್ಮಿಕರ ಸಂಘವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದರು.

ವ್ಯಾಪಾರ ಮತ್ತು ಸೇವೆಯನ್ನು ಕೇವಲ ಲಾಭದ ದೃಷ್ಟಿಯಿಂದ ನೋಡದೆ ಗುಣಮಟ್ಟ ಹಾಗು ಜನರ ವಿಶ್ವಾಸವನ್ನು ಗಳಿಸಬೇಕು. ಹಿರಿಯ ಸದಸ್ಯರನ್ನು ಗೌರವಿಸುವುದು ಹಾಗು ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವಂತಹ ಕಾರ್ಯಗಳು ಸಂಘದ ಸಾಮಾಜಿಕ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆಂದರು.

ತಾಲ್ಲೂಕು ಕಾರ್ಮಿಕ ಇಲಾಖೆ ಅಧಿಕಾರಿ ಶಶಿಕಲಾ ಅವರು ಮಾತನಾಡಿ, ವಿದ್ಯುತ್ ಉಪಕರಣಗಳ ರಿಪೇರಿ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಕೆಲಸದ ವೇಳೆ ಮೊಬೈಲ್ ಬಳಕೆ ಮಾಡುವುದರಿಂದ ಅಪಘಾತಗಳ ಸಾಧ್ಯತೆ ಹೆಚ್ಚಾಗುತ್ತದೆ. ಆದ್ದರಿಂದ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ ಕೆಲಸದ ಸಮಯದಲ್ಲಿ ಮೊಬೈಲ್ ಬಳಕೆಯನ್ನು ಸಾಧ್ಯವಾದಷ್ಟು ತಪ್ಪಿಸ ಬೇಕೆಂದು ಸಲಹೆ ನೀಡಿದರು.

ಈ ವೇಳೆ ಕಾರ್ಮಿಕ ಇಲಾಖೆಯಿಂದ ದೊರೆಯುವ ವಿವಿಧ ಯೋಜನೆಗಳು ಮತ್ತು ಸೌಲಭ್ಯ ಗಳ ಕುರಿತು ಮಾಹಿತಿ ನೀಡಿ, ಅರ್ಹ ಕಾರ್ಮಿಕರು ಅವುಗಳ ಸದುಪಯೋಗ ಪಡೆದುಕೊಳ್ಳ ಬೇಕೆಂದರು.

ಸಂಘದ ರಾಜ್ಯ ಕಾರ್ಯದರ್ಶಿ ಜಯರಾಮ್ ಅವರು ಮಾತನಾಡಿ, ಕಾರ್ಮಿಕರು ವೃತ್ತಿ ನಿಷ್ಠೆ ಮರೆಯಬೇಕು. ಪರಿಶ್ರಮ ಮತ್ತು ಶಿಸ್ತಿನಿಂದಲೇ ವ್ಯಕ್ತಿ ಹಾಗು ಸಮಾಜದ ಅಭಿವೃದ್ಧಿ ಸಾಧ್ಯವಾಗುತ್ತದೆಂದು ಹೇಳಿದರು.


ಹಾಸನ ಕಾರ್ಮಿಕ ಇಲಾಖೆಯ ಕಾವ್ಯ ಅವರು ಮಾತನಾಡಿ, ಸರ್ಕಾರದ ಸೌಲಭ್ಯಗಳ ಕುರಿತು ಕಾರ್ಮಿಕರಿಗೆ ಸಮರ್ಪಕ ಅರಿವು ಮೂಡಿದಾಗ ಮಾತ್ರ ಅವುಗಳ ಪ್ರಯೋಜನ ನೈಜ ಫಲಾನುಭವಿಗಳಿಗೆ ತಲುಪಲಿದೆ ಎಂದು ತಿಳಿಸಿದರು.

ಸಂಘದ ತಾಲ್ಲೂಕು ಅಧ್ಯಕ್ಷ ವಿಜಯಕುಮಾರ್ ಅವರು ಮಾತನಾಡಿ, ಪದಾಧಿಕಾರಿಗಳು ಮತ್ತು ಸದಸ್ಯರ ಸಹಕಾರದಿಂದ ಸಂಘ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಮುಂದೆಯೂ ಇದೇ ರೀತಿಯ ಒಗ್ಗಟ್ಟು ಕಾಪಾಡಿಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್ ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳನ್ನು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಂಘದ ಮುರಳಿ ಹತ್ವಾರ್, ಶ್ರೀಹರಿ, ನಜೀರುದ್ದೀನ್ ಶಹಜಾದ್, ಅಚ್ಯುತರಾವ್, ಮಧುಮಾಲತಿ ರುದ್ರೇಶ ಹಾಗು ಇತರರಿದ್ದರು.

# ಇಸ್ರೇಲ್ ಮೇಲೆ 3 ಡ್ರೋನ್ ದಾಳಿ: ಹಿಜ್ಬುಲ್ಲಾ ಮೇಲೆ ಪ್ರತಿ ದಾಳಿಗೆ ಸಜ್ಜು



• ಪ್ರಜೋದಯ ವರದಿ

**ಜೆರುಸಲೆಮ್:** ಪಶ್ಚಿಮ ಏಷ್ಯಾದಲ್ಲಿ ಯುದ್ಧ ಅಂತ್ಯವಾಯಿತು ಎನ್ನುವಷ್ಟರಲ್ಲಿ ಮತ್ತೆ ಸಂಘರ್ಷ ಆರಂಭಗೊಂಡಿದೆ. ಇಸ್ರೇಲ್ ಮೇಲೆ ಇಂದು 3 ಡ್ರೋನ್ ದಾಳಿ ನಡೆದಿದ್ದು, ಲೆಬನಾನ್‌ನ ಭಯೋತ್ಪಾದಕ ಗುಂಪು ಹಿಜ್ಬುಲ್ಲಾ ಈ ದಾಳಿ ನಡೆಸಿರುವ ಶಂಕೆ ಇದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ.

ಇಸ್ರೇಲ್ ಮತ್ತು ಲೆಬನಾನ್ ಗಡಿಯಲ್ಲಿ ಮೊದಲೆರಡು ವೈಮಾನಿಕ ದಾಳಿ ನಡೆದಿದ್ದು, ಉತ್ತರ ಇಸ್ರೇಲ್‌ನಲ್ಲಿ ಮತ್ತೊಂದು ದಾಳಿ ನಡೆದಿದೆ ಎಂದು ಮಿಲಿಟರಿ ಹೇಳಿದೆ. ಈ ದಾಳಿ ಬೆನ್ನಲ್ಲೇ ಹಿಜ್ಬುಲ್ಲಾಗಳ ಹಿಡಿತವಿರುವ ಬೈರೂತ್‌ನ ದಕ್ಷಿಣ ಸಬರ್ಬನ್ ಮೇಲೆ ಪ್ರತಿ ದಾಳಿಗೆ ಇಸ್ರೇಲ್‌ನ ಇಬ್ಬರು ಸಚಿವರು ಒತ್ತಾಯಿಸಿದ್ದಾರೆ. ಉತ್ತರ ಲೆಬನಾನ್ ಮೇಲಿನ ದಾಳಿಗೆ ನನ್ನ ಒತ್ತಾಯವು ಪ್ರಧಾನಿಯ ಸಿದ್ಧಾಂ ತದ ಪರೀಕ್ಷೆಯಾಗಿದೆ. ದಾಳಿಯನ್ನು ವ್ಯವಸ್ಥಿತವಾಗಿ ಸಂಘಟಿಸುವ ಮೂಲಕ ದಹಿಯೆಹ್‌ನಲ್ಲಿ(ಹಿಜ್ಬುಲ್ಲಾ ಹಿಡಿತವಿರುವ ಪ್ರದೇಶ) ಕಟ್ಟಡಗಳನ್ನು ನೆಲಕ್ಕುರುಳಿಸಬೇಕೆಂದು ಹಣಕಾಸು ಸಚಿವ ಬೆಸಲೆಲ್‌ಸ್ಮೊಟ್ರಿಕ್ ಒತ್ತಾಯಿಸಿದ್ದಾರೆ.

ಪ್ರತಿಯೊಂದು ಡ್ರೋನ್, ಪ್ರತಿ ಕ್ಷಿಪಣಿ ದಾಳಿ ಮತ್ತು ಪ್ರತಿಯೊಂದು ಯುದ್ಧ ವಿರಾಮ ಉಲ್ಲಂಘನೆಗೆ ದಹಿಯೆಹ್‌ನಲ್ಲಿ ಹಿಜ್ಬುಲ್ಲಾ ಹುಟ್ಟಡಗಿಸುವಂತಹ ದಾಳಿ ನಡೆಯಬೇಕೆಂದು ರಾಷ್ಟ್ರೀಯ ಭದ್ರತಾ ಸಚಿವ ಇಟಾಮರ್ ಬೆನ್ ಗ್ವಿರ್ ಹೇಳಿದ್ದಾರೆ.

ಹಿಜ್ಬುಲ್ಲಾ ಹಿಡಿತವಿರುವ ದಹಿಯೆಹ್ ಮೇಲೆ ದಾಳಿ ನಡೆಸುವುದಾಗಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೇರಿ ಇಸ್ರೇಲ್ ಅಧಿಕಾರಿಗಳು ಈ ಹಿಂದೆಯೇ ಎಚ್ಚರಿಕೆ ನೀಡಿದ್ದರು. ಈ ನಡುವೆ ದಾಳಿಯ ಮುನ್ಸೂಚನೆ ನೀಡಿರುವ ಇಸ್ರೇಲ್, ದಕ್ಷಿಣ ಲೆಬನಾನ್‌ನಲ್ಲಿ 29 ಹಳ್ಳಿಗಳ ಜನರಿಗೆ ಸ್ಥಳಾಂತರಕ್ಕೆ ಸೂಚಿಸಿದೆ.

# ಜೂನ್ 17ರಂದು ಮೋದಿ-ಟ್ರಂಪ್ ಭೇಟಿ



• ಪ್ರಜೋದಯ ವರದಿ

**ವಾಷಿಂಗ್ಟನ್:** ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್‌ನಲ್ಲಿ ಬುಧವಾರ ಭೇಟಿಯಾಗಲಿದ್ದಾರೆಂದು ಶ್ವೇತಭವನ ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಫ್ರಾನ್ಸ್‌ನಲ್ಲಿ ನಡೆಯಲಿರುವ ಜಿ7 ಶೃಂಗಸಭೆಯಲ್ಲಿ ಉಭಯ ನಾಯಕರು ಭಾಗಿಯಾಗುತ್ತಿದ್ದು, ಈ ಸಂದರ್ಭದಲ್ಲಿ ಜೂನ್ 17ರಂದು ಭೇಟಿಯಾಗುವರೆಂದು ವರದಿ ಮಾಡಿವೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಟ್ರಂಪ್ ಮತ್ತು ಮೋದಿ ಅವರು ವಾಷಿಂಗ್ಟನ್‌ನಲ್ಲಿ ಭೇಟಿ ಆಗಿದ್ದರು. ಆನಂತರ ಇಬ್ಬರೂ ಭೇಟಿ ಮಾಡುತ್ತಿರುವುದು ಇದೇ ಮೊದಲು.

# ಜು.26 ರಂದು ಚನ್ನರಾಯಪಟ್ಟಣದಲ್ಲಿ ಪತ್ರಿಕಾ ದಿನಾಚರಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಹೊರ ವಲಯದಲ್ಲಿರುವ ಬೆಲಸಿಂದ ಶ್ರೀವನದಲ್ಲಿ ಜು.26 ರಂದು ಪತ್ರಿಕಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ ಶೆಟ್ಟಿಹಳ್ಳಿ ಅವರು ಹೇಳಿದರು.



ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾ ದಿನಾಚರಣೆ ಕುರಿತ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಹಾಗು ಜಿಲ್ಲಾ ಸಂಘದ ಮಾರ್ಗದರ್ಶನದಂತೆ ಮತ್ತು ಸಂಘದ ಪದಾಧಿಕಾರಿಗಳ ಸಹಮತದೊಂದಿಗೆ ದಿನಾಂಕ ನಿಗದಿಪಡಿಸಲಾಗಿದೆ ಎಂದರು.

ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಸೂರಜ್‌ರೇವಣ್ಣ, ಶಾಸಕ ಸಿ.ಎನ್. ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಬಿಜೆಪಿ ಮುಖಂಡ ಚಿದಾನಂದ್, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಉಸ್ತುವಾರಿ ನಂಜುಂಡೇಗೌಡ ಪಾಲ್ಗೊಳ್ಳಲಿದ್ದಾರೆ. ವಿವಿಧ ಕ್ಷೇತ್ರಗಳ ಗಣ್ಯರನ್ನು ಆಹ್ವಾನಿಸಲಾಗುವುದು ಎಂದು ಮಾಹಿತಿ ನೀಡಿದರು.

ವಾಡಿಕೆಯಂತೆ ಇಬ್ಬರು ಪತ್ರಕರ್ತರು ಹಾಗು ವ್ಯಾಪ್ತಿಯ ವಿತರಕರಿಗೆ ಸನ್ಮಾನಿಸಲಾಗುವುದು. ವಿಶೇಷವಾಗಿ ಪತ್ರಕರ್ತರಿಗೆ, ಕುಟುಂಬದ ಸದಸ್ಯರಿಗೆ ಹಾಗು ಮಕ್ಕಳಿಗೆ ಕ್ರೀಡಾಕೂಟ ಆಯೋಜಿ ಸಲಾಗಿದೆ. ಎಲ್ಲಾ ಪತ್ರಿಕೆಗಳನ್ನು ಪ್ರದರ್ಶನದಲ್ಲಿ ಇರಿಸಲಾಗುವುದು. ಸಮಾಜದ ಅಂಕು-ಡೊಂಕುಗಳನ್ನು ತಮ್ಮ ಬರವಣಿಗೆಯ ಮೂಲಕ ತಿದ್ದಿ ಸಮಾಜದ ಒಳಿತಿಗಾಗಿ ಶ್ರಮಿಸುವ ಪತ್ರಕರ್ತರು ತಮ್ಮ ಆರೋಗ್ಯದ ಕಡೆಗೂ ಗಮನ ಹರಿಸಬೇಕು. ತಮ್ಮನ್ನೇ ನಂಬಿಕೊಂಡು ಕುಟುಂಬವಿದೆ. ಕಳೆದ ತಿಂಗಳು ಬೆಳ್ಳೂರು ಕ್ರಾಸ್ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಪತ್ರಕರ್ತರ ಕುಟುಂಬದ ಸದಸ್ಯರಿಗೆ ಆರೋಗ್ಯ ಉಚಿತ ತಪಾಸಣೆ ಕೈಗೊಳ್ಳಲಾಗಿತ್ತು ಎಂದರು.

ಕಳೆದ ವಾರ ಸಂಘದ ಕಚೇರಿಯಲ್ಲಿ ಕಾನೂನು ಸಮಾಲೋಚನೆ ಹಾಗು ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದು ಚನ್ನರಾಯಪಟ್ಟಣ ನ್ಯಾಯಾಲಯದ ಜಿಲ್ಲಾ 4ನೇ ಅಧಿಕ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಸ್.ಕಲ್ಪನಾ ಹಾಗು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ವಿ.ಕುಸುಮಾ ಅವರು ಕಾನೂನಿನಡಿ ಜನಸಾಮಾನ್ಯರ ಬದುಕಿನ ಬಗ್ಗೆ ವಿಸ್ತಾರವಾಗಿ ಚರ್ಚಿಸಿ ದ್ದಾರೆ. ಅದರಿಂದ ಪತ್ರಿಕೆಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕೆಲಸವಾಯಿತು ಎಂದು ಅಭಿಪ್ರಾಯಪಟ್ಟರು.

ಪೂರ್ವಸಿದ್ಧತೆ ಹಿನ್ನಲೆಯಲ್ಲಿ ಪಟ್ಟಣದ ಹೊರ ವಲಯದಲ್ಲಿರುವ ಬೆಲಸಿಂದ ಶ್ರೀವನವನ್ನು ವಲಯ ಅರಣ್ಯಾಧಿಕಾರಿ ಖಲಂದರ್ ಅವರೊಂದಿಗೆ ವೀಕ್ಷಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಆರ್. ಶ್ರೀನಿವಾಸ್ ಉಳ್ಳಾವಳ್ಳಿ, ನಿಕಟಪೂರ್ವ ಅಧ್ಯಕ್ಷ ಸಿದ್ದರಾಜು, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಬಿ.ಸಿ. ಚನ್ನೇಗೌಡ, ಉಪಾಧ್ಯಕ್ಷರಾದ ಕೆ.ಪಿ.ಪುಟ್ಟರಾಜು, ನಂದನ್ ಪುಟ್ಟಣ್ಣ, ಸಹ ಕಾರ್ಯದರ್ಶಿಗಳಾದ ಜಯಕುಮಾರ್, ನಾಗೇಂದ್ರ, ನಿರ್ದೇಶಕರಾದ ಎ.ಎಂ.ಜಯರಾಂ, ನಟೇಶ್ ಕಾಳೇನಹಳ್ಳಿ ಇದ್ದರು.

# ರಾಜಕಾಲುವೆ ಸ್ವಚ್ಛತೆಗೆ ಪಟ್ಟಣ ಪಂಚಾಯಿತಿ ಕ್ರಮ

**ಪ್ರಜೋದಯ ಫಲಶ್ರುತಿ**

• ಪ್ರಜೋದಯ ವರದಿ

**ಅರಕಲಗೂಡು:** ತ್ಯಾಜ್ಯಗಳಿಂದ ತುಂಬಿ ಒತ್ತುವರಿಗೆ ಒಳಗಾಗಿದ್ದ ಪಟ್ಟಣದ ರಾಜಕಾಲುವೆ ಸ್ವಚ್ಛತೆಯನ್ನು ಪಟ್ಟಣ ಪಂಚಾಯಿತಿ ಆಡಳಿತ ಕೈಗೊಂಡಿರುವುದನ್ನು ಸಾರ್ವಜನಿಕರು ಸ್ವಾಗತಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಕಳೆದ ಏಪ್ರಿಲ್-27ರಂದು ಪ್ರಜೋದಯ ಪತ್ರಿಕೆಯಲ್ಲಿ ರಾಜ ಕಾಲುವೆ ಯಲ್ಲಿ ತುಂಬಿರುವ ತ್ಯಾಜ್ಯ ಸ್ವಚ್ಛತೆ, ಒತ್ತುವರಿ ಕುರಿತು ವರದಿ ಮಾಡಲಾಗಿತ್ತು. ವರದಿಗೆ ಸ್ಪಂದಿಸಿದ ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷಕ ಚೇತನ್‌ಕುಮಾರ್ ಅವರು, ಹಳ್ಳದಲ್ಲಿನ ರಾಜಕಾಲುವೆಗೆ ಇಟಾಚಿಯನ್ನು ಇಳಿಸಿ ಸುಮಾರು ಒಂದು ವಾರ ಕಾಲ ಅರ್ಧ ಕಿಮೀ ದೂರದ ತನಕ ಕಾಲುವೆ ಸ್ವಚ್ಛತೆಯನ್ನು ಕೈಗೊಂಡಿದ್ದಾರೆ. ಕಾಲುವೆಯಲ್ಲಿ ಸಂಗ್ರಹವಾಗಿದ್ದ ತ್ಯಾಜ್ಯವನ್ನು ಟ್ರ್ಯಾಕ್ಟರ್ ಮೂಲಕ ಸಾಗಿಸಿದ್ದಾರೆ.

ಗಿಡಗಂಟಿಗಳಿಂದ ಕೂಡಿದ್ದ ರಾಜಕಾಲುವೆಯಲ್ಲಿ ತ್ಯಾಜ್ಯ ಸಂಪೂರ್ಣವಾಗಿ ತುಂಬಿದ್ದ ಪರಿಣಾಮ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ಅಕ್ಕಪಕ್ಕದ ತೋಟ, ಜನವಸತಿ ಮನೆಗಳಿಗೆ ನೀರು ಆವರಿಸಿಕೊಂಡು ಅವಾಂತರ ಸೃಷ್ಟಿಸಿತ್ತು. ಈ ಸಂದರ್ಭದಲ್ಲಿ ನಿವಾಸಿಗಳು ರಾಜಕಾಲುವೆ ಸ್ವಚ್ಛಗೊಳಿಸುವಂತೆ ದೂರು ನೀಡುತ್ತಾಬಂದಿದ್ದರೂ ಕೂಡ ಕಾರ್ಯರೂಪಕ್ಕೆ ಬಂದಿರಲಿಲ್ಲ. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ನಾಗೇಂದ್ರಕುಮಾರ್ ಅವರು ಕಚೇರಿಯನ್ನು ಬಿಟ್ಟು ಸಾರ್ವಜನಿಕ ಪ್ರದೇಶಕ್ಕೆ ಭೇಟಿನೀಡಿ ಪರಿಶೀಲನೆ ನಡೆಸುತ್ತಿರುವ ಪರಿಣಾಮ ರಾಜ ಕಾಲುವೆ ಒತ್ತುವರಿ ಮತ್ತು ತ್ಯಾಜ್ಯಗಳಿಂದ ಮುಕ್ತಿಪಡೆದಿದೆ ಎನ್ನಬಹುದು.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕ ರಸ್ತೆ ಪಕ್ಕದಲ್ಲಿನ ಖಾಲಿ ಜಾಗದಲ್ಲಿ ಮನೆ ಮುಟ್ಟುಗಳ ಹಾಗೂ ಇತರೆ ಅನುಪಯುಕ್ತ ತ್ಯಾಜ್ಯಗಳನ್ನು ಸುರಿಯುತ್ತಿರುವುದರ ಕುರಿತು ವರದಿಯನ್ನು ಪ್ರಕಟಿಸಲಾಗಿದೆ. ಈ ಬಗ್ಗೆಯೂ ಕ್ರಮ ಕೈಗೊಂಡು ಜನರಿಗೆ ಅನುಕೂಲ ಮಾಡಿ ಕೊಡ ಬೇಕೆಂಬುದು ಪ್ರಜೋದಯ ದಿನಪತ್ರಿಕೆ ಆಶಯವಾಗಿದೆ.

# ಮನಸ್ಸಿಗೆ ಖಾವಿ ತೊಟ್ಟವನು ನಿಜವಾದ ಸನ್ಯಾಸಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಸೃಷ್ಟಿ, ಸ್ಥಿತಿ, ಲಯವೇಬ್ರಹ್ಮ, ವಿಷ್ಣು, ಮಹೇಶ್ವರರು. ಇವುಗಳಲ್ಲೇ ನಾವು ದೇವರನ್ನು ಕಾಣಬಹುದು. ಯಾವುದೇ ವ್ಯಕ್ತಿಗೆ ಸನ್ಯಾಸ ನೀಡುವ ಹಾಗಿಲ್ಲ. ಅದು ಅವರೇ ಪಡೆದುಕೊಳ್ಳುವುದು. ಆದರೆ ಲೌಕಿಕ ಜಗತ್ತಿಗೆ ಸನ್ಯಾಸಿ ಎಂದು ಪರಿಚಯಿಸಲು ಮಾತ್ರ ಸನ್ಯಾಸ ದೀಕ್ಷೆ ನೀಡುವ ಸಮಾರಂಭಗಳು ನಡೆಯುತ್ತದೆಂದು ಕಾಂತಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.



ಶಂಕರಮಠದಲ್ಲಿ ಆಯೋಜಿಸಿದ್ದ ಕಾಂತಾನಂದ ಸರಸ್ವತೀ ಸ್ವಾಮೀಜಿ ಅವರು ಸನ್ಯಾಸ ಸ್ವೀಕರಿಸಿದ 16ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು 1998ರಲ್ಲೇ ಮಾನಸಿಕವಾಗಿ ಸನ್ಯಾಸ ಪಡೆದುಕೊಂಡಿದ್ದೆ. ನಾನು ಸನ್ಯಾಸಿ ಎಂದು ಲೌಕಿಕ ಜಗತ್ತಿಗೆ ಪರಿಚಯಿಸಲು ನಮ್ಮ ಗುರುಗಳು 2010ರಲ್ಲಿ ನನ್ನನ್ನು ಲೌಕಿಕ ಜಗತ್ತಿಗೆ ಪರಿಚಯಿಸಿದರು ಎಂದು ಸನ್ಯಾಸ ಸ್ವೀಕರಿಸಿದ ದಿನವನ್ನು ನೆನಪಿಸಿಕೊಂಡರು.

ಹಿರಿಯೂರು ದತ್ತಾಶ್ರಮದ ಸುಭೋದಾನಂದ ಸರಸ್ವತೀ ಸ್ವಾಮೀಜಿ ಮಾತನಾಡಿ, ಸನ್ಯಾಸಿಗಳು ಅಲಂಕಾರ ಮಾಡಿಕೊಂಡು ಇತರರನ್ನು ತನ್ನತ್ತ ಆಕರ್ಷಿಸುವಂತಾದರೆ ಅದು ಅವನು ಮಾಡಿದ ಪಾಪ ಎನಿಸಿಕೊಳ್ಳುತ್ತದೆ. ಅಲಂಕಾರ ಮಾಡಿಕೊಳ್ಳದ ಸನ್ಯಾಸಿಗಳ ಮುಖದಲ್ಲಿ ಇರುವ ತೇಜಸ್ಸು ಮತ್ತು ಅವರ ಜ್ಞಾನ ಭಕ್ತರನ್ನು ಆಕರ್ಷಿಸುತ್ತದೆ. ಶ್ರೀಕಾಂತನಂದ ಸರಸ್ವತೀ ಸ್ವಾಮೀಜಿ ತೇಜಸ್ಸುಳ್ಳವರಾಗಿದ್ದು ಜಾತಿ, ಮತ ಮೇಲು ಕೀಳು ಎಂಬ ಯಾವುದೇ ಭಾವನೆ ಇಲ್ಲದವರು ಎಂದರು.

ಬೆಂಗಳೂರಿನ ಆರ್.ಎಸ್.ವಿ.ಕೆಯ ಸತೀಶ್ ಗುರೂಜಿ ಮಾತನಾಡಿ, ಆಧುನಿಕತೆ ಬೆಳೆದಂತೆ ಗಂಡಹೆಂಡರ ನಡುವಿನ ಅಂತರ ಹೆಚ್ಚಾಗುತ್ತಿದೆ. ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ಕೊಲ್ಲುವಷ್ಟರ ಮಟ್ಟಿಗೆ ಜರ್ಜರಿತಾಗಿದ್ದಾರೆ. ಇಂತಹ ಮನಸ್ಥಿತಿ ಬದಲಾಗಬೇಕೆಂದರು ನಾವು ಅಧ್ಯಾತ್ಮ ಕಾರ್ಯಕ್ರಮಗಳಲ್ಲಿಭಾಗವಹಿಸಬೇಕು. ಸತ್ಸಂಗಗಳಲ್ಲಿ ಭಾಗವಹಿಸಬೇಕು ಎಂದರು.

ಪಟ್ಟಾಭಿ ಕಾರ್ಯಕ್ರಮ ನಿರೂಪಿಸಿದರು. ರಾಮಪ್ರಸನ್ನ ವಂದಿಸಿದರು. ಹಿರಿಯೂರು ತಾಲ್ಲೂಕಿನ ಆಲೂರು ಸುಜ್ಞಾನಬೋಧಾಶ್ರಮದ ಬ್ರಹ್ಮಾನಂದ ತೀರ್ಥ ಬಿಕ್ಷು, ಶಿವಮೊಗ್ಗಾ ಜಿಲ್ಲೆಯ ಕಲ್ಲಗಂಗೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ವಿನಯಾನಂದ ಸರಸ್ವತೀ ಸ್ವಾಮೀಜಿ, ರಾಮನಾಥಪುರದ ಸುಪ್ರಭಾನಂದ ಸರಸ್ವತೀ ಸ್ವಾಮೀಜಿ, ಆರ್‌ಎಸ್‌ವಿಕೆ ಬೆಂಗಳೂರಿನ ಸತೀಶ್ ಗುರೂಜಿ, ಚಲನ ಚಿತ್ರ ನಟ ಶ್ರೀಧರ್ ಭಾಗವಹಿಸಿದ್ದರು.

## ಬ್ರೆಜಿಲ್-ಅಮೇರಿಕಾದ ಕೆಲ ಭಾಗಗಳಲ್ಲಿ ಶೇ.85ರಷ್ಟು ಎಥೆನಾಲ್ ಬಳಕೆ | ಕೇಂದ್ರ ಸಚಿವ ನಿತಿನ್ ಗಡ್ಕರಿ

# ವಾಹನಗಳಿಗೆ ಸಂಪೂರ್ಣ ಎಥೆನಾಲ್ ಬಳಕೆಗೆ ಅಸ್ತು

• ಪ್ರಜೋದಯ ವರದಿ

**ನವದೆಹಲಿ:** ಆಮದು ಮಾಡಿಕೊಳ್ಳುವ ಪಳೆಯುಳಿಕೆ ಇಂಧನ ಮತ್ತು ಶುದ್ಧ ಇಂಧನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿ, ಭಾರತವು ಶೇ.100ರಷ್ಟು ಎಥೆನಾಲ್ ಇಂಧನ ಬಳಕೆಗೆ ಕಾನೂನು ಮಾನ್ಯತೆ ನೀಡಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಘೋಷಿಸಿದ್ದಾರೆ. ಇದರರ್ಥ ಈಗ ಸಂಪೂರ್ಣ ಎಥೆನಾಲ್ ಬಳಸಿ ಕೊಂಡು ವಾಹನಗಳನ್ನು ಓಡಿಸಲು ಅನುಮತಿಸಲಾಗುತ್ತದೆ.






ನರೇಂದ್ರ ಮೋದಿ ಪ್ರಧಾನಿಯಾಗಿ 12 ವರ್ಷ ಪೂರೈಸಿದ ಹಿನ್ನಲೆಯಲ್ಲಿ ನಾಗ್ಪುರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಗಡ್ಕರಿ, ಈ ಅನುಮೋದನೆಯು ಎಥೆನಾಲ್ ಅನ್ನು ಪೆಟ್ರೋಲ್‌ಗೆ ಕಾರ್ಯಸಾಧ್ಯವಾದ ಪರ್ಯಾಯ ಇಂಧನವಾಗಿ ಹೊರ ಹೊಮ್ಮಲು ಅನುವು ಮಾಡಿಕೊಡುತ್ತದೆ. ಭಾರತದ ವಾರ್ಷಿಕ ಪಳೆಯುಳಿಕೆ ಇಂಧನ ಆಮದು ಗಳಿಂದಾಗುತ್ತಿರುವ 22 ಲಕ್ಷ ಕೋಟಿ ಹೊರೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದರು.

ಈ ಸಂಬಂಧಿತ ಆದೇಶದ ಕಡತಕ್ಕೆ ಶುಕ್ರವಾರ ರಾತ್ರಿ ಸಹಿ ಹಾಕಲಾಗಿದೆ. ಶೇ.100ರಷ್ಟು ಎಥೆನಾಲ್ ಬಳಕೆಗೆ ಅನುವು ಮಾಡಿಕೊಡಲು ನಿಯಂತ್ರಕ ಚೌಕಟ್ಟನ್ನು ಅಂತಿಮಗೊಳಿಸಲಾಗುತ್ತಿದೆ. ವಾಹನಗಳಿಗೆ ಶೇ.100ರಷ್ಟು ಎಥೆನಾಲ್ ಬಳಕೆಗೆ ನಿಯಮ ರೂಪಿಸುವ ಕಡತಕ್ಕೆ ಕಳೆದ ರಾತ್ರಿ 8 ಗಂಟೆ ಸುಮಾರಿಗೆ ನಾನು ಸಹಿ ಹಾಕಿ, ಕಾನೂನು ಪ್ರಕ್ರಿಯೆಗೆ ಕಳುಹಿಸಿದ್ದೇನೆಂದು ಹೇಳಿದ್ದಾರೆ.

ಭಾರತದಲ್ಲಿ ಚಾಲನೆಯಲ್ಲಿರುವ ಬಹುತೇಕ ಕಾರುಗಳಲ್ಲಿ ಶೇ.85ರಷ್ಟು ಅಥವಾ ಶೇ.100ರಷ್ಟು ಎಥೆನಾಲ್ ಬಳಸುವ ತಂತ್ರಜ್ಞಾನ ಇಲ್ಲ. ಅಧಿಕ ಪ್ರಮಾಣದ ಗ್ಯಾಸೋಲಿನ್ ಮತ್ತು ಕಡಿಮೆ ಪ್ರಮಾಣದ ಎಥೆನಾಲ್ ಮಿಶ್ರಣ ಬಳಕೆಗೆ ಮಾತ್ರ ಅನುವು ಮಾಡಿಕೊಡುತ್ತವೆ. ಏಕೆಂದರೆ, ಈ ವಾಹನಗಳಲ್ಲಿ ಅಗತ್ಯ ಹಾರ್ಡ್‌ವೇರ್ ಮತ್ತು ಇಂಜಿನ್ ನಿಯತಾಂಕಗಳಿಲ್ಲ. ಆದರೆ, ಇತ್ತೀಚೆಗೆ ಮಾರುತಿ ಸುಜುಕಿ, ಹೀರೊ ಮೋಟೊಕಾರ್ಪ್, ಟೊಯೊಟಾ, ಸುಜುಕಿ ಮತ್ತು ಹುಂಡೈ ಕಂಪನಿ ಗಳು ಅಧಿಕ ಪ್ರಮಾಣದಲ್ಲಿ ಅಥವಾ ಸಂಪೂರ್ಣ ಎಥೆನಾಲ್ ಬಳಸಿ ಓಡಿಸಬಲ್ಲ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿವೆ. ಎಥೆನಾಲ್ ನವೀಕರಿಸಬಹುದಾದ ಜೈವಿಕ ಇಂಧನವಾಗಿದ್ದು, ಪ್ರಾಥಮಿಕವಾಗಿ ಕಬ್ಬು, ಜೋಳ ಮತ್ತು ಇತರ ಕೃಷಿ ಕಚ್ಚಾ ವಸ್ತುಗಳ ಉಪಉತ್ಪನ್ನವಾಗಿದೆ. ಭಾರತದಲ್ಲಿ ಹೆಚ್ಚಿನ ಎಥೆನಾಲ್ ಅನ್ನು ಮೊಲಾಸಸ್ ನಂತಹ ಕಬ್ಬಿನ ಆಧಾರಿತ ಉತ್ಪನ್ನಗಳಿಂದ ಉತ್ಪಾದಿಸಲಾಗುತ್ತದೆ. ಎಥೆನಾಲ್ ಅನ್ನು ವಿವಿಧ ಪ್ರಮಾಣದಲ್ಲಿ ಪೆಟ್ರೋಲ್‌ನೊಂದಿಗೆ ಬೆರೆಸಬಹುದು ಅಥವಾ ವಿಶೇಷವಾಗಿ ವಿನ್ಯಾಸಗೊಳಿಸಲಾದ ಫ್ಲೆಕ್ಸ್-ಇಂಧನ ವಾಹನಗಳಲ್ಲಿ ಸಂಪೂರ್ಣ ಅದನ್ನೇ ಬಳಸಬಹುದು. ಪೆಟ್ರೋಲ್ ಜೊತೆ ಎಥೆನಾಲ್ ಬಳಸಿ ವಾಹನ ಚಾಲನೆಯು ಇತ್ತೀಚಿನ ವರ್ಷಗಳಲ್ಲಿ ಬಹಳಷ್ಟು ಹೆಸರುವಾಸಿ ಯಾಗಿದೆ. ಆರಂಭಿಕವಾಗಿ ಶೇ.5 ಮತ್ತು 10ರಷ್ಟು, ಬಳಿಕ, ಶೇ.20ರಷ್ಟು ಎಥೆನಾಲ್ ಬಳಸುವ ಮೂಲಕ ಪ್ರಯೋಗ ನಡೆಸಲಾಗಿದೆ. ಹೀಗಾಗಿ, ಸರ್ಕಾರವು ನವೀಕರಿಸಬಹುದಾದದ ಇಂಧನ ಉತ್ಪಾದನೆಗೆ ಆದ್ಯತೆ ಹೆಚ್ಚಿಸಿದೆ ಎಂದರು.

ಬ್ರೆಜಿಲ್ ಮತ್ತು ಅಮೇರಿಕದ ಕೆಲ ಭಾಗಗಳಲ್ಲಿ ಶೇ.85ರಷ್ಟು ಎಥೆನಾಲ್ ಬಳಕೆಯ ವಾಹನಗಳನ್ನು ಬಳಸಲಾಗುತ್ತಿದೆ. ದೇಶದಲ್ಲಿ ನವೀಕರಿಸಬಹುದಾದ ಇಂಧನದ ಉತ್ಪಾದನೆ ಹೆಚ್ಚಿಸುವ ಮೂಲಕ ಕ್ರಮೇಣ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅವಲಬನೆಯನ್ನು ತಪ್ಪಿಸುವುದು ಸರ್ಕಾರದ ಗುರಿಯಾಗಿದೆ. ವಿವಿಧ ಕಂಪನಿಗಳು ದ್ವಿಚಕ್ರ ವಾಹನ ಸೇರಿ ಶೇ.100ರಷ್ಟು ಎಥೆನಾಲ್ ಬಳಸುವ ವಾಹನಗಳ ಉತ್ಪಾದನೆಯತ್ತ ಶೀಘ್ರ ಚಿತ್ತ ಹರಿಸಲಿವೆ ಎಂದಿದ್ದಾರೆ.

## ಜೂ.17 ರಂದು ಕಬ್ಬಳಿಯಲ್ಲಿ ಪ್ರತಿಭಾ ಪುರಸ್ಕಾರ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ :** ತಾಲ್ಲೂಕಿನ ಕಬ್ಬಳಿ ಶ್ರೀ ಬಸವೇಶ್ವರಸ್ವಾಮಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜೂ.17 ರಂದು ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಹಿರೀಸಾವೆ ಹೋಬಳಿ ಘಟಕದ ಅಧ್ಯಕ್ಷ ಹೆಚ್.ಎ.ಪ್ರಮೋದ್ ಅವರು ಹೇಳಿದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ. ಕಬ್ಬಳಿ ಶಾಖಾಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ ಉಪಸ್ಥಿತಿ ಇರಲಿದ್ದಾರೆಂದರು.

ಹಿರೀಸಾವೆ ಹೋಬಳಿ ವ್ಯಾಪ್ತಿಯ ಸರ್ಕಾರಿ ಹಾಗು ಖಾಸಗಿ ಪ್ರೌಢಶಾಲೆಗಳಲ್ಲಿ 2026-27ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಪಡೆದಿರುವ ಮತ್ತು ಅತಿ ಹೆಚ್ಚು ಅಂಕ ಪಡೆದಿರುವ ತಲಾ ಒಬ್ಬರಂತೆ ವಿದ್ಯಾರ್ಥಿಗಳು ಹಾಗು ಪದವಿಪೂರ್ವ ಕಾಲೇಜುಗಳಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವ ಒಟ್ಟು 20 ವಿದ್ಯಾರ್ಥಿಗಳಿಗೆ ಅಭಿನಂದಿಸಲಾಗುವುದು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಹೆಚ್.ಸತೀಶ್, ವಿಶ್ರಾಂತ ಪಾಂಶುಪಾಲ ಪ್ರೊ. ಎನ್.ತಮ್ಮಣ್ಣಗೌಡ, ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಪಿ ಶಂಕರ್, ಮಾಜಿ ಅಧ್ಯಕ್ಷ ಹೆಚ್.ಇ.ಬೋರಣ್ಣ, ಬಸವೇಶ್ವರ ಸ್ವಾಮಿ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ ಟಿ.ತಿಮ್ಮೇಗೌಡ ಇತರರಿದ್ದರು.

# ನೀಸ್ ನಗರದಲ್ಲಿ ಪ್ರಧಾನಿ ಮೋದಿಗೆ ಅದ್ದೂರಿ ಸ್ವಾಗತ

## ಫ್ರಾನ್ಸ್-ಭಾರತ ಮಹತ್ವದ ಮಾತುಕತೆ

• ಪ್ರಜೋದಯ ವರದಿ

**ನವದೆಹಲಿ ;** ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಜಿ7 ಶೃಂಗಸಭೆಯಲ್ಲಿ ಭಾಗವಹಿಸಲು ಫ್ರಾನ್ಸ್‌ಗೆ ತೆರಳಿದ್ದಾರೆ. ಫ್ರಾನ್ಸ್ ಮತ್ತು ಸ್ಲೋವಾಕಿಯಾ ದೇಶಗಳ ಐದು ದಿನಗಳ ಪ್ರವಾಸದ ಮೊದಲ ಹಂತವಾಗಿ ಮೋದಿ ಅವರು ಫ್ರಾನ್ಸ್‌ನ ನೀಸ್ ನಗರಕ್ಕೆ ತಲುಪಿದರು.

ಫ್ರಾನ್ಸ್ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಮಾತುಕತೆ ಹಾಗೂ ನಾವೀನ್ಯತೆ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಮುಖ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ನೀಸ್ ಕೋಟ್ ಡಿ ಅಝೂರ್ ವಿಮಾನ ನಿಲ್ದಾಣದಲ್ಲಿ ಫ್ರಾನ್ಸ್‌ನ ಶಿಕ್ಷಣ ಸಚಿವ ಎಡ್ವಾರ್ಡ್ ಜೆಫ್ರೇ,ಉನ್ನತ ಶಿಕ್ಷಣ, ಸಂಶೋಧನೆ ಮತ್ತು ಬಾಹ್ಯಾಕಾಶ ಸಚಿವ ಫಿಲಿಪ್ ಬ್ಯಾಪ್ಟಿಸ್ಟ್,ಭಾರತದಲ್ಲಿನ ಫ್ರಾನ್ಸ್ ರಾಯಭಾರಿ ಥಿಯರಿ ಮಥೋ, ನೀಸ್ ನಗರದ ಮೇಯರ್ ಎರಿಕ್ ಸಿಯೊಟ್ಟಿ ಸೇರಿ ಹಲವು ಗಣ್ಯರು ಅವರನ್ನು ಮೋದಿ ಅವರನ್ನು ಆತೀಯವಾಗಿ ಸ್ವಾಗತಿಸಿದರು.

ಆಗಮನದ ಬಳಿಕ ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಿದ ಮೋದಿ ಅವರು, ನೀಸ್‌ಗೆ ಬಂದಿಳಿದಿದ್ದೇನೆ. ಈ ಫ್ರಾನ್ಸ್ ಪ್ರವಾಸದಲ್ಲಿ ನೀಸ್ ಜೊತೆಗೆ ಎವಿಯನ್ ಮತ್ತು ಪ್ಯಾರಿಸ್‌ನಲ್ಲಿಯೂ ಕಾರ್ಯಕ್ರಮಗಳಿವೆ. ಭಾರತದ ಪ್ರಮುಖ ಅಭಿವೃದ್ಧಿ ಪಾಲುದಾರ ರಾಷ್ಟ್ರಗಳೊಂದಿಗೆ



ಸ್ನೇಹವನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಭೆಗಳು ನಡೆಯಲಿವೆ ಎಂದು ತಿಳಿಸಿದ್ದಾರೆ.

ಫ್ರಾನ್ಸ್ ನಲ್ಲಿರುವ ಭಾರತೀಯ ಸಮುದಾಯದ ಸದಸ್ಯರು ತ್ರಿವರ್ಣ ಧ್ವಜಗಳನ್ನು ಹಿಡಿದು ಭಾರತ್ ಮಾತಾ ಕಿ ಜೈ ಘೋಷಣೆಗಳನ್ನು ಕೂಗಿ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ ಕೋರಿದರು. ಮೋದಿ ತಂಗಿದ್ದ ಹೋಟೆಲ್ ಹೊರಗೆ ಭಾರತೀಯ ಸಮುದಾಯದ ಸದಸ್ಯರು ಅವರನ್ನು ಉತ್ಸಾಹದಿಂದ ಬರಮಾಡಿಕೊಂಡರು. ಸಾಂಪ್ರದಾಯಿಕ ನೃತ್ಯ ಪ್ರದರ್ಶನವು ಸ್ವಾಗತಕ್ಕೆ ಸಾಂಸ್ಕೃತಿಕ ಮೆರುಗು ನೀಡಿತು.

ನೀಸ್‌ನಲ್ಲಿರುವ ಭಾರತೀಯ ಸಮುದಾಯದಿಂದ ಸರಣೀಯ ಸ್ವಾಗತ ದೊರೆಯಿತು. ತಾಯ್ನಾಡಿನಿಂದ ಸಾವಿರಾರು ಕಿಲೋಮೀಟರ್ ದೂರದಲ್ಲಿದ್ದರೂ, ಭಾರತದೊಂದಿಗೆ ಅವರ ಬಾಂಧವ್ಯ ಎಂದಿನಂತೆಯೇ ಗಟ್ಟಿಯಾಗಿದೆ, ಎಂದು ಮೋದಿ ಮತ್ತೊಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಫ್ರೆಂಚ್ ಹಾಗೂ ಯುರೋಪಿಯನ್ ಕಲಾವಿದರು ಪ್ರದರ್ಶಿಸಿದ ಕಥಕ್, ಒಡಿಸ್ಸಿ ಮತ್ತು ಭರತನಾಟ್ಯನೃತ್ಯಗಳನ್ನೂ ಪ್ರಧಾನಿ ವೀಕ್ಷಿಸಿದರು. ಮೋದಿ ಅವರ ಆಗಮನದ ಗೌರವಾರ್ಥವಾಗಿ ನೀಸ್ ನಗರದ ಮೇಯರ್ ಕಚೇರಿಯಲ್ಲಿರುವ ಸಿಟಿ ಹಾಲ್‌ನಲ್ಲಿ ಭಾರತೀಯ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ವಿದೇಶಿ ನಾಯಕರಿಗೆ ಅಪರೂಪವಾಗಿ ನೀಡಲಾಗುವ ಗೌರವ ಇದಾಗಿದೆ.

ಪ್ರವಾಸದ ಅಂಗವಾಗಿ ಮೋದಿ ಅವರು ಜೂನ್ 15ರಂದು ಸ್ಲೋವಾಕಿಯಾ ಕ್ಕೆ ಭೇಟಿ ನೀಡಿ, ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಮತ್ತು ಪ್ರಧಾನಿ ರಾಬರ್ಟ್ ಫಿಕೊ ಅವರೊಂದಿಗೆ ಬ್ರಾಟಿಸ್ಲಾವಾದಲ್ಲಿ ಮಾತುಕತೆ ನಡೆಸಲಿದ್ದಾರೆ. ಅಲ್ಲದೆ ಉದ್ಯಮಿಗಳೊಂದಿಗೂ ಸಂವಾದ ನಡೆಸಲಿದ್ದಾರೆ.

ಅದಾದ ಬಳಿಕ ಅವರು ಮತ್ತೆ ಫ್ರಾನ್ಸ್ ಗೆ ಮರಳಿ ಜೂನ್ 16 ಮತ್ತು 17ರಂದು ಎವಿಯನ್‌ನಲ್ಲಿ ನಡೆಯಲಿರುವ ಜಿ7 ಶೃಂಗಸಭೆಯಲ್ಲಿಭಾಗವಹಿಸಲಿದ್ದಾರೆ. ಶೃಂಗಸಭೆಯಲ್ಲಿ ಅಂತರರಾಷ್ಟ್ರೀಯ ಸಹಕಾರ, ಆರ್ಥಿಕ ಬೆಳವಣಿಗೆ ಮತ್ತು ಕೃತಕ ಬುದ್ಧಿಮತ್ತೆ ಸೇರಿದಂತೆ ವಿವಿಧ ಜಾಗತಿಕ ವಿಷಯಗಳ ಕುರಿತು ಜಿ7 ರಾಷ್ಟ್ರಗಳ ನಾಯಕರು ಹಾಗೂ ಆಹ್ವಾನಿತ ಪಾಲುದಾರ ರಾಷ್ಟ್ರಗಳೊಂದಿಗೆ ಅವರು ಚರ್ಚಿಸಲಿದ್ದಾರೆ. ಇದೇ ವೇಳೆ ಹಲವು ದ್ವಿಪಕ್ಷೀಯ ಸಭೆಗಳನ್ನೂ ನಡೆಸುವ ನಿರೀಕ್ಷೆ ಇದೆ.

ಪ್ರವಾಸದ ಅಂತಿಮ ಹಂತದಲ್ಲಿ ಜೂನ್ 18ರಂದು ಮೋದಿ ಅವರು ಪ್ಯಾರಿಸ್‌ನಲ್ಲಿ ನಡೆಯಲಿರುವ ಯುರೋಪಿನ ಅತಿದೊಡ್ಡ ತಂತ್ರಜ್ಞಾನ ಮತ್ತು ಸ್ಟಾರ್ಟ್‌ಅಪ್ ಉತ್ಸವವಾದ ವಿವಾಟೆಕ್ 2026 ಕಾರ್ಯಕ್ರಮದಲ್ಲಿ ಅಧ್ಯಕ್ಷ ಮ್ಯಾಕ್ರೋನ್ ಅವರೊಂದಿಗೆ ಭಾಗವಹಿಸಲಿದ್ದಾರೆ.ಈ ವರ್ಷದ ಕಾರ್ಯಕ್ರಮದಲ್ಲಿ ಭಾರತವು ಅತಿದೊಡ್ಡ ರಾಷ್ಟ್ರೀಯ ಪೆವಿಲಿಯನ್ ಹೊಂದಿರಲಿದೆ.

## ಸಕಲೇಶಪುರದಲ್ಲಿ ಮೊಬೈಲ್ ಎಸೆದಿದ್ದ ಕೊಲೆ ಆರೋಪಿ ಪುನೀತ್




• ಪ್ರಜೋದಯ ವರದಿ

**ಸಕಲೇಶಪುರ:** ರೌಡಿಶೀಟರ್ ಮಂಜೇಶ್ ಕೊಲೆ ಪ್ರಕರಣದ ಆರೋಪಿ ಪುನೀತ್ ಪಟ್ಟಣದಲ್ಲಿ ಸಂಚರಿಸಿದ್ದ ಜಾಗಗಳಲ್ಲಿ ಭಾನುವಾರ ಸ್ಥಳ ಮಹಜರು ನಡೆಸಲಾಯಿತು.

ಜೂ.7ರ ರಾತ್ರಿ ಹಾಸನದ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಎದುರು ಬೆಂಗಳೂರಿನ ಮಂಜೇಶ್ ಕೊಲೆ ಮಾಡಲಾಗಿತ್ತು. ಕೃತ್ಯದಲ್ಲಿ ಒಟ್ಟು 13 ಜನರು ಪಾಲ್ಗೊಂಡಿದ್ದರು. ಈಗಾಗಲೇ 10 ಜನರನ್ನು ಪೊಲೀಸರು ಬಂಧಿಸಿದ್ದಾರೆ. ತುಮಕೂರಿನ ಪುನೀತ್ ಹಾಗು ಇತರ ನಾಲ್ವರು ಪೊಲೀಸರ ಕಣ್ತಪ್ಪಿಸಲು ಸಕಲೇಶಪುರಕ್ಕೆ ಪ್ರಯಾಣ ಬೆಳೆಸಿದ್ದರು. ಪಟ್ಟಣದ ವಿಶಾಲ್ ಮಾರ್ಟ್ ಹಿಂಭಾಗದ ಖಾಲಿ ಜಾಗದಲ್ಲಿ ತನ್ನ ಮೊಬೈಲ್ ಹಾಗು ಮಾರಕಾಸ್ತ್ರಗಳನ್ನು ಪುನೀತ್ ಎಸೆದಿದ್ದ. ಒಂದು ವೇಳೆ ಯಾರಿಗಾದರೂ ಮೊಬೈಲ್ ಸಿಕ್ಕರೂ ಗೊತ್ತಾಗಬಾರದೆಂದು ಅದನ್ನು ಒಡೆದು ಹಾಕಿದ್ದ. ಪ್ರಕರಣ ಸಂಬಂಧ ಮೂವರು ಪ್ರಮುಖ ಆರೋಪಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

## ಕೋಳಿ ಸಾಕಾಣಿಕೆದಾರರಿಗೆ ಅನ್ಯಾಯವಾಗಲ್ಲ: ಭರವಸೆ

• ಪ್ರಜೋದಯ ವರದಿ



**ಹಾಸನ :** ಕೋಳಿ ಸಾಕಾಣಿಕೆದಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚಿಸಿರುವ ಪ್ರತಿ ಕೆ.ಜಿ.ಗೆ 10 ರೂ. ದರವನ್ನು ಖಂಡಿತವಾಗಿ ಕೊಡಿಸಲಾಗುವುದು. ಈ ವಿಚಾರದಲ್ಲಿ ಫಲಾನುಭವಿಗಳಿಗೆ ಅನ್ಯಾಯವಾಗುವುದಿಲ್ಲವೆಂದು ಪಶುಪಾಲನಾ ಇಲಾಖೆ ರಾಜ್ಯ ಆಯುಕ್ತೆ ಶಿಲ್ಪಾನಾಗ್ ಅವರು ಭರವಸೆ ನೀಡಿದರು.

ಬೆಂಗಳೂರಿನ ಪಶು ಭವನದಲ್ಲಿ ಅಖಿಲ ಕರ್ನಾಟಕ ಕೋಳಿ ಸಾಕಾಣಿಕೆ ಮುಖಂಡರೊಂದಿಗೆ ಮಾತನಾಡಿದ ಅವರು, ಯಾವುದೇ ಕಂಪನಿಗಳ ಒತ್ತಡಕ್ಕೆ ಮಣಿಯದೆ ರಾಜ್ಯದ ಕೋಳಿ ಸಾಕಾಣಿಕೆ ರೈತರಿಗೆ ಹತ್ತು ರೂಪಾಯಿ ಕೊಡಿಸಲಾಗುವುದು. ಈ ಘೋಷಣೆ ಸುಳ್ಳು, ತಪ್ಪು ಮಾಹಿತಿ ಹರಡಲಾಗುತ್ತಿದೆ. ಅದಕ್ಕೆ ಕೋಳಿ ಸಾಕಾಣಿಕೆದಾರರು ಕಿವಿಗೊಡಬಾರದೆಂದು ಅಭಯ ನೀಡಿದರು.

ಶೀಘ್ರದಲ್ಲೇ ಕಂಪನಿಯವರೊಂದಿಗೆ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ರಾಜ್ಯದ ರೈತರು ಭಯಪಡಬಾರದು. ಕೋಳಿ ಸಾಕಾಣಿಕೆ ಉದ್ದಿಮೆ ಮುಂದುವರೆಸಬೇಕೆಂದು ಸಲಹೆ ನೀಡಿದರು.

ಸಭೆಯಲ್ಲಿ ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ಹಾಸನ, ಗೌರವ ಅಧ್ಯಕ್ಷ ಹೊಸಕೋಟೆ ಮಾರಣ್ಣ, ಮುಖಂಡ ರಾದ ಕೋಲಾರದ ಶ್ರೀಧರ ರೆಡ್ಡಿ, ಮುನೇಗೌಡ, ಕೊಳತೂರ್ ಕೃಷ್ಣಪ್ಪ, ಶೆಟ್ಟಿಹಳ್ಳಿ ನಂಜುಂಡಪ್ಪ, ನಾರಾಯಣಸ್ವಾಮಿ, ರಾಜಶೇಖರ್ ಮತ್ತಿತರರಿದ್ದರು.


# ಬಂಡಾಯ ಬೆಂಬಲ ಸಿಕ್ಕರೂ ಎನ್‌ಡಿಎಗೆ ಬಹುಮತ ಇಲ್ಲ

• ಪ್ರಜೋದಯ ವರದಿ

**ನವದೆಹಲಿ:** ತೃಣಮೂಲ ಕಾಂಗ್ರೆಸ್‌ನ ಬಂಡಾಯ ಸಂಸದರ ಬೆಂಬಲದ ಹೊರತಾಗಿಯೂ ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತವು ಎನ್‌ಡಿಎಗೆ ಇನ್ನೂ ಸಿಕ್ಕಿಲ್ಲ.

ಸಂಸತ್‌ನ ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬಹುಮತ ಪಡೆಯಲು ಎನ್‌ಡಿಎ ಪಾಳಯ ತನ್ನ ಪ್ರಯತ್ನ ಮುಂದುವರಿಸಿದೆ. ಮಹತ್ವದ ಸಾಂವಿಧಾನಿಕ ತಿದ್ದುಪಡಿ ಮಸೂದೆಗಳನ್ನು ಅಂಗೀಕರಿಸುವುದಕ್ಕೆ ಈ ಬಹುಮತ ಅಗತ್ಯ. ಈ ಕಾರಣಕ್ಕೆ ಪಶ್ಚಿಮ ಬಂಗಾಳ ವಿಧಾನ ಸಭೆ ಚುನಾವಣೆ ಬಳಿಕ ಟಿಎಂಸಿಯಲ್ಲಿ ಭುಗಿಲೆದ್ದಿರುವ ಬಂಡಾಯವು ಎನ್‌ಡಿಎಗೆ ನೆರವಾಗಲಿದೆ.

ಇತ್ತೀಚೆಗೆ ಮುಕ್ತಾಯಗೊಂಡಿರುವ ರಾಜ್ಯಸಭಾ ಚುನಾವಣೆಯು, ಮೇಲ್ಮನೆಯಲ್ಲಿ ಮೂರನೇ ಎರಡರಷ್ಟು ಬಹುಮತದ ಗಡಿ ದಾಟುವುದಕ್ಕೆ ಎನ್‌ಡಿಎಗೆ ಅನುಕೂಲವಾಗಲಿದೆ. ಆದರೆ,



ಟಿಎಂಸಿ ಬಂಡಾಯ ಸಂಸದರ ಬೆಂಬಲದ ಹೊರತಾಗಿಯೂ ಲೋಕಸಭೆಯಲ್ಲಿ ಮೂರನೇ ಎರಡಷ್ಟು ಬಹುಮತವು ಎನ್‌ಡಿಎಗೆ ಇನ್ನೂ ಮರೀಚಿಕೆ ಎನಿಸಲಿದೆ.

ಸಾಂವಿಧಾನಿಕ ತಿದ್ದುಪಡಿ ಮಸೂದೆಗಳನ್ನು ಲೋಕಸಭೆಯಲ್ಲಿ ಅಂಗೀಕರಿಸುವುದಕ್ಕೆ 363 ಸಂಸದರ ಬೆಂಬಲ ಅಗತ್ಯ. ಲೋಕಸಭೆಯಲ್ಲಿ ಟಿಎಂಸಿಯ 20 ಸಂಸದರು ಪ್ರತ್ಯೇಕ ಗುಂಪು ರಚಿಸಿಕೊಂಡಿದ್ದು, ಎನ್‌ಡಿಎಗೆ ಬೆಂಬಲ ಸೂಚಿಸಲು ಒಲವು ವ್ಯಕ್ತಪಡಿಸಿದ್ದಾರೆ. ಈ ಸದಸ್ಯರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಸೋಮವಾರ ಭೇಟಿ ಮಾಡಿ, ಟಿಎಂಸಿಯಿಂದ ತಾವು ಹೊರಬರುತ್ತಿರುವ ಕುರಿತ ಪತ್ರವನ್ನು ಅವರಿಗೆ ಸಲ್ಲಿಸಲಿದ್ದಾರೆ. ಈ ಬೆಳವಣಿಗೆ ಬಳಿಕ, ಲೋಕಸಭೆಯಲ್ಲಿ ಎನ್‌ಡಿಎ ಸಂಖ್ಯೆ 213ರ ಗಡಿ ತಲುಪಬಹುದು.

**ರಾಜ್ಯಸಭೆ:** ರಾಜ್ಯಸಭೆಯಲ್ಲಿ ಸದ್ಯ ಎನ್‌ಡಿಎ ಸದಸ್ಯ ಬಲ ಸದ್ಯ 148. ಜಾರ್ಖಂಡ್ ಮತ್ತು ಮಿಜೋರಾಂನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಗೆಲ್ಲಲಿದೆ. ಟಿಎಂಸಿಯ ಮೂವರು ಸಂಸದರು ರಾಜೀನಾಮೆ ನೀಡಿರುವ ಕಾರಣ, ಪಶ್ಚಿಮ ಬಂಗಾಳದಿಂದ ರಾಜ್ಯಸಭೆಗೆ ನಡೆಯುವ ಉಪಚುನಾವಣೆಯಲ್ಲಿ ಈ ಮೂರೂ ಸ್ಥಾನಗಳನ್ನು ಎನ್‌ಡಿಎ ಸುಲಭವಾಗಿ ಗೆಲ್ಲಬಹುದಾಗಿದೆ. ಅದರೊಂದಿಗೆ ಅದರ ಸಂಖ್ಯಾಬಲ 154ಕ್ಕೆ ಏರಲಿದೆ. ಆಗ, ರಾಜ್ಯಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತಕ್ಕಾಗಿ ಎನ್‌ಡಿಎ ಪಾಳಯಕ್ಕೆ 9 ಸ್ಥಾನಗಳ ಕೊರತೆ ಉಂಟಾಗಲಿದೆ. ಟಿಎಂಸಿಯ ಮತ್ತಷ್ಟು ರಾಜ್ಯಸಭಾ ಸಂಸದರು ರಾಜೀನಾಮೆ ನೀಡುವ ಸಾಧ್ಯತೆ ಇರುವದರಿಂದ, ಬಹುಮತಕ್ಕೆ ಬೇಕಾದ 163 ಸ್ಥಾನಗಳನ್ನು ಹೊಂದುವುದು ಎನ್‌ಡಿಎಗೆ ಸಾಧ್ಯವಾಗಬಹುದು. ಆದರೆ, ಉತ್ತರ ಪ್ರದೇಶದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಎನ್‌ಡಿಎದ 10 ಸಂಸದರ ಅಧಿಕಾರಾವಧಿ ನವೆಂಬರ್‌ನಲ್ಲಿ ಅಂತ್ಯವಾಗಲಿದೆ. ಪ್ರಸಕ್ತ ವಿಧಾನ ಸಭೆಯಲ್ಲಿ ಸಮಾಜವಾದಿ ಪಕ್ಷವು ಹೊಂದಿರುವ ಸದಸ್ಯರ ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ, ಆ ಪಕ್ಷವು ಮುಂಬರುವ ರಾಜ್ಯಸಭಾ ಚುನಾವಣೆಯಲ್ಲಿ ತನ್ನ ಸ್ಥಾನಗಳ ಸಂಖ್ಯೆ ಹೆಚ್ಚಿಸಿಕೊಳ್ಳುವುದು ಖಚಿತ. ಇನ್ನೊಂದೆಡೆ, ವಿಪಕ್ಷಗಳ ಮೈತ್ರಿಕೂಟ ಇಂಡಿಯಾ ಸದಸ್ಯ ಬಲ 64ಕ್ಕೆ ಇಳಿದಿದೆ. ಮೈತ್ರಿಕೂಟದಿಂದ ಡಿಎಂಕೆ ಹೊರ ನಡೆದ ಕಾರಣ 8 ಸದಸ್ಯರ ಸಂಖ್ಯೆ ಕಡಿಮೆ ಯಾಗಿದೆ. ಎಎಪಿಯ ಮೂವರು ಸಂಸದರು ಇಂಡಿಯಾದಿಂದ ಅಂತರ ಕಾಯ್ದುಕೊಂಡಿದ್ದಾರೆ.

ವೈಎಸ್‌ಆರ್ ಕಾಂಗ್ರೆಸ್ ಮತ್ತು ಬಿಜೆಡಿ ಕ್ರಮವಾಗಿ 7 ಹಾಗು 6 ಸ್ಥಾನಗಳನ್ನು ಹೊಂದಿವೆ. ಅವುಗಳಲ್ಲದೇ ಎಂಡಿಎಂಕೆ ಪಕ್ಷವು ಎನ್‌ಡಿಎ ಹಾಗು ಇಂಡಿಯಾ ಪೈಕಿ ಯಾವ ಪಾಳಯಕ್ಕಾದರೂ ಬೆಂಬಲ ವ್ಯಕ್ತಪಡಿಸುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

## ಕದನ ವಿರಾಮ ಒಪ್ಪಂದದ ಕುರಿತು ಅಂತಿಮ ನಿರ್ಧಾರವಾಗಿಲ್ಲ: ಇರಾನ್

**ಟೆಹರಾನ್:** ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸುವ ಉದ್ದೇಶದಿಂದ ಅಮೇರಿಕಾ ರೂಪಿಸಿರುವ ಕದನ ವಿರಾಮ ಒಪ್ಪಂದದ ಕುರಿತು ಟೆಹರಾನ್ ಯಾವುದೇ ಅಂತಿಮ ನಿರ್ಧಾರಕ್ಕೆ ಬಂದಿಲ್ಲ ಎಂದು ಇರಾನ್‌ನ ಫಾರ್ಸ್ ಸುದ್ದಿ ಸಂಸ್ಥೆ ಭಾನುವಾರ (ಜೂನ್ 14) ವರದಿ ಮಾಡಿದೆ.

ಕದನ ವಿರಾಮ ಒಪ್ಪಂದಕ್ಕೆ ಸಂಬಂಧಿಸಿದಂತೆ, ಅಮೇರಿಕಾದ ಪ್ರಸ್ತಾವನೆ ಕುರಿತು ಇರಾನ್ ಯಾವುದೇ ಅಂತಿಮ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಈ ಕುರಿತು ಇರಾನಿನ ಸಂಧಾನ ತಂಡವು ಕೂಡ ಅಧಿಕೃತ ಘೋಷಣೆಗಳನ್ನು ಮಾಡಿಲ್ಲ ಎಂದು ಹೇಳಿದೆ.

ಅಮೇರಿಕಾ ಪ್ರಸ್ತಾವನೆಯಿಂದ ಇರಾನ್‌ಗೆ ಯಾವುದೇ ಲಾಭವಿಲ್ಲ. ಅದು ನಮ್ಮ ದೇಶದ ಹಿತಾಸಕ್ತಿಗಳ ವಿರುದ್ಧವಾಗಿದೆ ಎಂದು ಕಟ್ಟರ್ ಇರಾನಿ ನಾಯಕರು ಅದನ್ನು ವಿರೋಧಿಸಿದ್ದಾರೆಂದು ವರದಿ ಮಾಡಿದೆ.

## ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿದ ಚಿರತೆ ಸಂಚಾರ

» ಮೊದಲನೇ ಪುಟದಲ್ಲಿ

ಈ ಭಾಗದ ರೈತರು ರಾತ್ರಿ ವೇಳೆ ಯಲ್ಲಿಯೂ ತೋಟಗಳಿಗೆ ನೀರು ಹರಿಸುವ ಅನಿವಾರ್ಯತೆ ಎದುರಿ ಸುತ್ತಿದ್ದಾರೆ. ಆದರೆ, ಚಿರತೆ ಸಂಚಾರ ಹೆಚ್ಚಿರುವ ಹಿನ್ನಲೆಯಲ್ಲಿ ಕತ್ತಲಿನಲ್ಲಿ ಜಮೀನುಗಳಿಗೆ ತೆರಳಲು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಾಣಾ ಪಾಯದ ಭೀತಿಯ ನಡುವೆ ಕೃಷಿ ಚಟುವಟಿಕೆಗಳನ್ನು ನಡೆಸಬೇಕಾದ ಸ್ಥಿತಿ ಉಂಟಾಗಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಯಾವುದೇ ಸಮಯದಲ್ಲಿ ಅನಾಹುತ ಸಂಭವಿಸುವ ಸಾಧ್ಯತೆ ಇರುವುದರಿಂದ ಅರಸೀಕೆರೆ ವಲಯ ಅರಣ್ಯ ಇಲಾಖೆಯ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಚಿರತೆ ಸಂಚರಿಸುತ್ತಿರುವ ಪ್ರದೇಶಗಳಲ್ಲಿ ಕೂಡಲೇ ಬೋನುಗಳನ್ನು ಅಳವಡಿಸಿ ಪ್ರಾಣಿಯನ್ನು ಸೆರೆ ಹಿಡಿಯಬೇಕು. ರಾತ್ರಿ ವೇಳೆ ಅರಣ್ಯ ಇಲಾಖೆ ಸಿಬ್ಬಂದಿಯಿಂದ ಗಸ್ತು ವ್ಯವಸ್ಥೆ ಕಲ್ಪಿಸಿ ರೈತರು ಹಾಗು ಸಾರ್ವಜನಿಕರಿಗೆ ಅಗತ್ಯ ರಕ್ಷಣೆ ಒದಗಿಸಬೇಕೆಂದು ರೈತ ಮುಖಂಡರು ಆಗ್ರಹಿಸಿದ್ದಾರೆ.

## ಗ್ಯಾರಂಟಿ ಯೋಜನೆ ನಿಲ್ಲಿಸುವುದಿಲ್ಲ

» ಮೊದಲನೇ ಪುಟದಿಂದ

ಫಲಾನುಭವಿಗಳ ಸಂಖ್ಯೆಯನ್ನು ಲಕ್ಷ ಲಕ್ಷದಷ್ಟು ಇಳಿಸುವ ಪ್ರಯತ್ನಕ್ಕೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದರು.

ಅರ್ಹರಿಗೆ ಯೋಜನೆಯ ಲಾಭ ಕೊಡಬೇಕು ಎಂಬುದರಲ್ಲಿ ಎರಡು ಮಾತಿಲ್ಲ. 3 ವರ್ಷದ ಕೆಳಗೆ ಇವರದೇ ಸರ್ಕಾರ ಇತ್ತು. ಗ್ಯಾರಂಟಿ ಕೊಡುವಾಗ ಅರ್ಹತೆ, ಅನರ್ಹತೆಯನ್ನು ಯಾಕೆ ಯೋಚಿಸಿಲ್ಲ. ಗ್ಯಾರಂಟಿಯಿಂದ ಕ್ಷೇತ್ರದ ಅಭಿವೃದ್ಧಿ ಆಗುತ್ತಿಲ್ಲವೆಂದು ಅವರದೇ ಪಕ್ಷದ ಶಾಸಕ ಆರ್.ವಿ.ದೇಶಪಾಂಡೆ ಹೇಳಿದ್ದಾರೆ. ಗ್ಯಾರಂಟಿಯಿಂದ ಅಭಿವೃದ್ಧಿ ಆಗದೇ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ಇದೆ ಎಂದು ಕಾಂಗ್ರೆಸ್ ಶಾಸಕರೇ ಹೇಳಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಯ ರಾಯರೆಡ್ಡಿ ಅವರೂ ಗ್ಯಾರಂಟಿಗಳಿಂದ ಸಂಕಷ್ಟ ಆಗಿದೆ ಎಂದು ಒಪ್ಪಿಕೊಂಡಿದ್ದಾರೆ ಎಂದರು.

ಈ ಎಲ್ಲಾ ವಾಸ್ತವ ಸತ್ಯ ಮರೆಮಾಚಿ ಲಕ್ಷ ಲಕ್ಷ ಅನರ್ಹ ಫಲಾನುಭವಿಗಳಿಗೆ ಚುನಾವಣೆ ವೇಳೆ ಗ್ಯಾರಂಟಿ ಕೊಟ್ಟರು ಆಗ ಹೇಳಿದ್ದು ಒಂದು ಈಗ ಹೇಳೋದು ಮತ್ತೊಂದು. ಚುನಾವಣೆ ಮೊದಲು ಅರ್ಹರಾದವರು ಚುನಾವಣೆ ಆದ ನಂತರ ಅನರ್ಹ ಎಂದು ಹೇಳುವುದು ಜನರಿಗೆ ಮಾಡಿದ ಅಪಮಾನ. ಇದು ಸರಿ ಅಲ್ಲವೆಂದರು.

## ಭಾರತದ ಹಡಗಿನ ಇಂಜಿನ್ ವಿಫಲ: ಸಿಬ್ಬಂದಿ ರಕ್ಷಣಾ ಕಾರ್ಯ ಚುರುಕು



• ಪ್ರಜೋದಯ ವರದಿ

**ದುಬೈ:** ಒಮಾನ್ ಕರಾವಳಿಯಲ್ಲಿ ಭಾರತದ ವಾಣಿಜ್ಯ ಹಡಗಿನ ಇಂಜಿನ್ ವಿಫಲಗೊಂಡಿದ್ದು,ಸಿಬ್ಬಂದಿ ಸ್ಥಳಾಂತರ ಕಾರ್ಯ ನಡೆಯುತ್ತಿದೆ ಎಂದು ಮಸ್ಕತ್‌ನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ಭಾರತದ ಧ್ವಜವಿರುವ ವಾಣಿಜ್ಯ ಹಡಗು ವಿರಾಟ್ 1ರಲ್ಲಿ ದೋಷ ಕಂಡು ಬಂದಿದ್ದು, ಅದರಲ್ಲಿ 4 ಸಿಬ್ಬಂದಿ ಇದ್ದಾರೆ ಎಂದು ವರದಿ ತಿಳಿಸಿದೆ.

ಗಲ್ಫ್ ವಲಯದಲ್ಲಿ ಅಮೇರಿಕಾ ಮತ್ತು ಇರಾನ್ ಸಂಘರ್ಷದ ನಡುವೆ ಈ ಘಟನೆ ನಡೆದಿದೆ. ಹಡಗಿನ ಇಂಜಿನ್ ವೈಫಲ್ಯ ಕಂಡುಬಂದಿದೆ. ಸಿಬ್ಬಂದಿಯನ್ನು ಕ್ರಮೇಣ ಲೈಫ್ ರಾಫ್ಟ್‌ಗೆ ಸ್ಥಳಾಂತರಿಸಲಾಗಿದೆ. ಒಮಾನ್ ಅಧಿಕಾರಿಗಳ ಸಹಯೋಗದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆಂದು ಭಾರತದ ರಾಯಭಾರ ಕಚೇರಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ಒಮಾನ್ ಕಡಲಲ್ಲಿ ಕಳೆದ ವಾರ ಭಾರಿ ಉದ್ವಿಗ್ನತೆ ಏರ್ಪಟ್ಟಿತ್ತು. ಭಾರತದ ಮೂರು ಹಡಗುಗಳ ಮೇಲೆ ಅಮೇರಿಕಾ ಸೇನೆ ಕ್ಷಿಪಣಿ ಹಾಳಿ ನಡೆಸಿತ್ತು. ಈ ದಾಳಿಯಲ್ಲಿ ಭಾರತದ ಮೂವರು ಸಿಬ್ಬಂದಿ ಮೃತಪಟ್ಟಿದ್ದರು.

ಈ ಸಂಬಂಧ ಅಮೇರಿಕಾ ರಾಯಭಾರಿಯನ್ನು ಕರೆಸಿ ಪ್ರತಿಭಟನೆ ವ್ಯಕ್ತಪಡಿಸಿದ್ದ ಭಾರತ, ನಮ್ಮ ಹಡಗಿನ ಮೇಲೆ ದಾಳಿ ಮತ್ತು ಸಿಬ್ಬಂದಿ ಹತ್ಯೆಯುಸ್ವೀಕಾರಾರ್ಹವಲ್ಲ. ಕೂಡಲೇ ದಾಳಿ ಯನ್ನು ಸ್ಥಗಿತ ಗೊಳಿಸುವ ಮೂಲಕ ಅಂತರ ರಾಷ್ಟ್ರೀಯ ನೌಕಾಯಾನ ಭದ್ರತೆಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿತ್ತು.

## ಟಿಎಂಸಿಯಲ್ಲಿ ತಾರಕಕ್ಕೇರಿದ ಆಂತರಿಕ ಬಿಕ್ಕಟ್ಟು

**ಕೋಲ್ಕತ್ತಾ:** ಟಿಎಂಸಿಯಲ್ಲಿ ಬಂಡಾಯ ಮತ್ತಷ್ಟು ತೀವ್ರಗೊಂಡಿದೆ. ಟಿಎಂಸಿಯ ಮತ್ತಿಬ್ಬರು ಸಂಸದರು ಬಂಡಾಯ ಬಣಕ್ಕೆ ಸೇರಲಿದ್ದಾರೆಂದು ಭಿನ್ನ ಮತೀಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಭಾನುವಾರ ಹೇಳಿದ್ದಾರೆ. ಈ ಮೂಲಕ ಲೋಕಸಭೆಯಲ್ಲಿ ಟಿಎಂಸಿ ಬಂಡಾಯ ಸಂಸದರ ಸಂಖ್ಯೆ 22ಕ್ಕೆ ಏರಿಕೆಯಾಗಲಿದೆ.

ನವದೆಹಲಿಗೆ ತೆರಳುವ ಮುನ್ನ ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆಮಾತನಾಡಿದ ಕಾಕೋಲಿ ಅವರು, ಪ್ರತ್ಯೇಕ ಸಂಸದೀಯ ಬಣವಾಗಿ ಮಾನ್ಯತೆ ಪಡೆಯಲು ಸೋಮವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಬಂಡಾಯ ಸಂಸದರ ಗುಂಪು ಭೇಟಿ ಮಾಡಲಿದೆ. ನಾವು ದೆಹಲಿಗೆ ತೆರಳುತ್ತಿದ್ದೇವೆ. 22 ಸಂಸದರು ನಮ್ಮ ಜೊತೆಗಿದ್ದಾರೆ. ನಮ್ಮ ಜೊತೆಗೆ ಬಂದಿರುವ ಮತ್ತಿಬ್ಬರು ಸಂಸದರ ಹೆಸರನ್ನು, ಅವರು ಬಂಡಾಯ ಬಣಕ್ಕೆ ಔಪಚಾರಿಕವಾಗಿ ಸೇರ್ಪಡೆಯಾದ ಬಳಿಕ ಬಹಿರಂಗಪಡಿಸಲಾಗುತ್ತದೆಂದು ಹೇಳಿದರು.

## ಸ್ಮೃತಿ ಮಂದಾನ ಬ್ಯಾಟಿಂಗ್: ಪಾಕ್‌ಗೆ 171 ರನ್ ಗುರಿ

• ಪ್ರಜೋದಯ ವರದಿ

**ಬರ್ಮಿಂಗ್‌ಹ್ಯಾಮ್:** ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯ ಲೀಗ್ ಹಂತದ ಪಂದ್ಯದಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿದೆ. ಪಾಕಿಸ್ತಾನ ತಂಡವು ಗೆಲುವು ಸಾಧಿಸಲು 171 ರನ್ ಗಳಿಸಬೇಕಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ಭಾರತ ತಂಡಕ್ಕೆ ಉತ್ತಮ ಆರಂಭ ದೊರಕಲಿಲ್ಲ. ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ 6 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಜೆಮಿಮಾ ರಾಡ್ರಿಗಸ್ 7 ಎಸೆತಗಳಲ್ಲಿ 1 ರನ್ ಗಳಿಸಿ ಔಟಾದರು.

18 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿದ್ದ ಭಾರತ ತಂಡಕ್ಕೆ ಸ್ಮೃತಿ ಮಂದಾನ (68 ರನ್, 44 ಎಸೆತ) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (36 ರನ್, 35 ಎಸೆತ ) 3ನೇ ವಿಕೆಟ್‌ಗೆ 91 ರನ್ (63 ಎಸೆತ) ಜೊತೆಯಾಟವಾಡುವ ಮೂಲಕ




ಆಸರೆಯಾದರು.

ಮಂದಾನ ವಿಕೆಟ್ ಬಿದ್ದ ನಂತರ ಬಂದ ಭಾರತಿ ಫೂಲ್ಮಾಲಿ 1 ರನ್ ಗಳಿಸಿ ಔಟಾದರು. ರಿಚಾ ಘೋಷ್ (34 ರನ್, 17 ಎಸೆತ) ಹಾಗು ದೀಪ್ತಿ ಶರ್ಮಾ (12 ರನ್, 9 ಎಸೆತ) ಡೆತ್ ಓವರ್‌ನಲ್ಲಿ ಸ್ಫೋಟಕ ಆಟವಾಡುವ ಮೂಲಕ ತಂಡದ ಮೊತ್ತವನ್ನು 170ರ ಗಡಿ ಮುಟ್ಟಿಸಿದರು. ಪಾಕಿಸ್ತಾನ ಪರ ಫಾತಿಮಾ ಸನಾ, ಸಾದಿಯಾ ಇಕ್ಬಾಲ್ ತಲಾ 2 ವಿಕೆಟ್ ಪಡೆದರು. ಟಾಸ್ ವೇಳೆ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವಿನ ಹಸ್ತಲಾಘವ ಪ್ರಹಸನ ಮುಂದುವರಿಯಿತು.


## ಏಷ್ಯನ್ ಗೇಮ್ಸ್‌ಗೆ ನಿಮ್ಮದೇ ಖರ್ಚಿನಲ್ಲಿ ತೆರಳಿ: ಪಾಕ್

• ಪ್ರಜೋದಯ ವರದಿ

**ಕರಾಚಿ:** ಮುಂದಿನ ವರ್ಷ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲಿರುವ ಟಿಟಿ ಆಟಗಾರರು ಅವರದೇ ಖರ್ಚಿನಲ್ಲಿ ತೆರಳಬೇಕು ಎಂದು ಪಾಕಿಸ್ತಾನ ಟೇಬಲ್ ಟೆನಿಸ್ ಫೆಡರೇಷನ್ (ಪಿಟಿಟಿಎಫ್) ತಿಳಿಸಿದೆ.

ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವವರು ಪ್ರಯಾಣ ಮತ್ತು ವಸತಿ ವೆಚ್ಚವನ್ನು ಅವರೇ ನೋಡಿಕೊಳ್ಳಬೇಕೆಂದು ಪಿಟಿಟಿಎಫ್ ಹೇಳಿತ್ತು. ಈ ನಿರ್ಧಾರಕ್ಕೆ ಪಾಕಿಸ್ತಾನದ ಪುರುಷ ಮತ್ತು ಮಹಿಳಾ ಟಿಟಿ ಆಟಗಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಲಾಹೋರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಆಯ್ಕೆ ಸುತ್ತಿನಲ್ಲಿ ಟಿಟಿ ಆಟಗಾರರು ಭಾಗವಹಿಸಿದ್ದು, ಅವರು ಪ್ರಯಾಣ ಭತ್ಯೆಯ ಕುರಿತು ಪಿಟಿಟಿಎಫ್ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಈ ವಿಷಯ ಬಹಿರಂಗಗೊಂಡಿದೆ. ಆಯ್ಕೆ ಸುತ್ತಿಗಾಗಿ ಭಾಗವಹಿಸುವ ಆಟಗಾರರಿಗೆ ಯಾವುದೇ ಸಂಭಾವನೆ ಮತ್ತು ಪ್ರಯಾಣ ಭತ್ಯೆ ನೀಡುವುದಿಲ್ಲ ಹಾಗೂ ಏಷ್ಯನ್ ಗೇಮ್ಸ್‌ಗೆ ಆಯ್ಕೆ ಯಾಗುವ ಆಟಗಾ



ರರು ಅವರ ಪ್ರಯಾಣ ಮತ್ತು ಪಂದ್ಯಾವಳಿಯ ವೇಳೆಯ ಖರ್ಚು ವೆಚ್ಚಗಳನ್ನು ಅವರೇ ನೋಡಿಕೊಳ್ಳ ಬೇಕೆಂದು ಅಧಿಕಾರಿಗಳು ತಿಳಿಸಿದ್ದಾ ರೆಂದು ಟಿಟಿ ಆಟಗಾರರೊಬ್ಬರು ಹೇಳಿದ್ದಾರೆ.

ಈ ವಿಷಯದ ಕುರಿತಾಗಿ ಟಿಟಿ ಆಟಗಾರರು ಪ್ರತಿಭಟನೆ ನಡೆಸಿದ್ದಾರೆ. ಆ ವೇಳೆ, ನಮಗೆ ಕ್ರೀಡಾ ಇಲಾಖೆಯಿಂದ ಯಾವುದೇ ಅನುದಾನ ಬಂದಿಲ್ಲ. ನಾವು ಆಯ್ಕೆ ಸುತ್ತು ಮಾಡುತ್ತಿರುವುದೇ ದೊಡ್ಡ ವಿಷಯ. ಏಷ್ಯನ್ ಗೇಮ್ಸ್‌ಗೆ ಕೂಡ ಯಾವುದೇ ಅನುದಾನ ಬಂದಿಲ್ಲ ಎಂದು ಪಿಟಿಟಿಎಫ್ ಅಧಿಕಾರಿಗಳು ಹೇಳಿದ್ದಾರೆ.

ಏಷ್ಯನ್ ಟೇಬಲ್ ಟೆನಿಸ್ ಟೂರ್ನಿಗಳಲ್ಲಿ ಮಲೇಷ್ಯಾ, ಚೀನಾ, ದಕ್ಷಿಣ ಕೊರಿಯಾ, ಭಾರತವು ಪ್ರಾಬಲ್ಯ ಸಾಧಿಸಿದೆ. ಹಾಗಾಗಿ, ಪಾಕಿಸ್ತಾನವು ಇದುವರೆಗೂ ಯಾವುದೇ ಪದಕ ಗೆಲ್ಲಲು ಸಾಧ್ಯವಾಗಿಲ್ಲ.

# ಅಮೇರಿಕಾ-ಇರಾನ್ ಶಾಂತಿ ಒಪ್ಪಂದ ಅನುಮಾನ

• ಪ್ರಜೋದಯ ವರದಿ

**ವಾಷಿಂಗ್ಟನ್ :** ಅಮೇರಿಕಾ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧ ಸಂಘರ್ಷದ ಒಪ್ಪಂದಕ್ಕೆ ಅಂಕಿತ ಹಾಕುವ ಕುರಿತು ಅನಿಶ್ಚಿತತೆ ತಲೆದೋರಿದೆ. ಇಂದು ಈ ಶಾಂತಿ ಒಪ್ಪಂದಕ್ಕೆ ಅಂಕಿತ ಹಾಕಲಾಗುವುದೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿದ್ದಾರೆ. ಆದರೆ ಈ ಪ್ರಸ್ತಾಪವನ್ನು ಇರಾನ್ ಸಂಪೂರ್ಣವಾಗಿ ತಳ್ಳಿಹಾಕಿದೆ. ಹೀಗಾಗಿ ಉಭಯ ರಾಷ್ಟ್ರಗಳು ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ವಿಚಾರದಲ್ಲಿ ಗೊಂದಲ ತಲೆದೋರಿದೆ.

ಕಳೆದ 3 ತಿಂಗಳಿನಿಂದ ಅಮೇರಿಕಾ ಮತ್ತು ಇರಾನ್ ನಡುವೆ ಸಂಘರ್ಷ ತಲೆದೋರಿದೆ. ಈ ಹಿನ್ನಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಇಂಧನ ಬಿಕ್ಕಟ್ಟಿಗೆ ಕಾರಣವಾಗಿದೆ. ಯುದ್ಧಾಂತ್ಯಕ್ಕೆ ಸಹಿ ಹಾಕಲು ಎರಡು ದೇಶಗಳು ಮುಂದಾಗಿವೆ ಎಂದು ಈ ಮೊದಲು ಟ್ರಂಪ್ ಹೇಳಿಕೆ ನೀಡಿದ್ದರು.

ಈ ಒಪ್ಪಂದಕ್ಕೆ ತೆರೆ ಬೀಳುತ್ತಿದ್ದಂತೆ ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗುವುದೆಂದು ಟ್ರಂಪ್ ಹೇಳಿದ್ದರು. ಈ ಸಂಬಂಧ ಮಾತುಕತೆಗಳು ಅಂತಿಮ ಹಂತಕ್ಕೆ ಬಂದಿದ್ದರೂ ಇಂದು ಮುದ್ರೆ ಬೀಳುವುದು ಅನುಮಾನವಾಗಿದೆ. ಸಾಮಾಜಿಕ ಮಾಧ್ಯಮ ಟ್ರುತ್ ಸೋಶಿಯಲ್‌ನಲ್ಲಿ ಸುದೀರ್ಘ ಪೋಸ್ಟ್ ಹಾಕಿರುವ ಡೊನಾಲ್ಡ್ ಟ್ರಂಪ್, ಈ ಒಪ್ಪಂದವು ಇರಾನ್ ಯಾವುದೇ ರೂಪದಲ್ಲಿ (ಖರೀದಿ, ಅಭಿವೃದ್ಧಿ ಅಥವಾ ಸಾಗಣೆ) ಅಣ್ವಸ್ತ್ರಗಳನ್ನು ಹೊಂದದಂತೆ ತಡೆಯಲು ಅಣ್ವಸ್ತ್ರ ರಹಿತ ಭದ್ರತಾ ಗೋಡೆಯಾಗಿ ಕೆಲಸ ಮಾಡಲಿದೆ ಎಂದಿದ್ದಾರೆ.

ಮಧ್ಯಪ್ರಾಚ್ಯದ ಸುದೀರ್ಘ ಭವಿಷ್ಯಕ್ಕಾಗಿ



ನಾವು ಇರಾನ್ ಜೊತೆ ಕೆಲಸ ಮಾಡಲು ಎದುರು ನೋಡುತ್ತಿದ್ದೇವೆ. ಒಂದು ವೇಳೆ ಈ ರಾಜತಾಂತ್ರಿಕ ಪ್ರಕ್ರಿಯೆ ವಿಫಲವಾದರೆ, ನಮ್ಮ ಬಳಿ ಅಂತಿಮ ಪರ್ಯಾಯ ಮಾರ್ಗ ಮಿಲಿಟರಿ ದಾಳಿಗೆ ಸಿದ್ಧವಿದೆ ಎಂದು ಟ್ರಂಪ್ ಎಚ್ಚರಿಕೆಯನ್ನೂ ನೀಡಿದ್ದಾರೆ.

2015 ರ ಒಬಾಮಾ ಆಡಳಿತದ ಇರಾನ್ ಅಣ್ವಸ್ತ್ರ ಒಪ್ಪಂದವನ್ನು ಕಟುವಾಗಿ ಟೀಕಿಸಿದ ಟ್ರಂಪ್, ಅಂದು ಒಬಾಮಾ ಇರಾನ್‌ಗೆ 1.7 ಬಿಲಿಯನ್ ಡಾಲರ್ ನಗದು ಸೇರಿ ನೂರಾರು ಬಿಲಿಯನ್ ಡಾಲರ್ ಹಣವನ್ನು ನೀಡಿದ್ದರು. ಆದರೆ, ನಮ್ಮ ಒಪ್ಪಂದದಲ್ಲಿ ಯಾವುದೇ ಹಣದ ಕೈಬದಲಾವಣೆ ಆಗುತ್ತಿಲ್ಲವೆಂದು ಪ್ರತಿಪಾದಿಸಿದ್ದಾರೆ.

ಆದರೆ, ಮಾಧ್ಯಮಗಳ ಪ್ರಕಾರ, ಒಬಾಮಾ ಕಾಲದ ಹಣ ವರ್ಗಾವಣೆಯು 1979ರ ಮುಂಚಿನ ಮಿಲಿಟರಿ ಒಪ್ಪಂದದ ಇತ್ಯರ್ಥವಾಗಿತ್ತೇ ಹೊರತು ನೇರ ಪಾವತಿಯಾಗಿರಲಿಲ್ಲ. ಮಧ್ಯಸ್ಥಿಕೆ ವಹಿಸಿದ ಪಾಕಿಸ್ತಾನದ ತರಾತುರಿ ಈ ಮಾತುಕತೆಯಲ್ಲಿ ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ತೀವ್ರ ಉತ್ಸಾಹ ತೋರಿದ್ದಾರೆ. ಮಹತ್ವದ ಶಾಂತಿ ಒಪ್ಪಂದಕ್ಕೆ ನಾವು ಅತ್ಯಂತ ಹತ್ತಿರವಾಗಿದ್ದೇವೆ. ಮುಂದಿನ 24 ಗಂಟೆಗಳಲ್ಲಿ ಒಪ್ಪಂದ ಅಂತಿಮಗೊಳ್ಳಲಿದ್ದು, ಪಾಕಿಸ್ತಾನವು ಇಂಟರ್ನೆಟ್ ಮೂಲಕ ಎಲೆಕ್ಟ್ರಾನಿಕ್ ಸಹಿ ಪ್ರಕ್ರಿಯೆಗೆ ಸಿದ್ಧತೆ ನಡೆಸುತ್ತಿದೆ. ಮುಂದಿನ ವಾರ ತಾಂತ್ರಿಕ ಮಟ್ಟದ ಮಾತುಕತೆ ನಡೆಯಲಿದೆ ಎಂದು ಎಕ್ಸ್ (ಟ್ವಿಟರ್) ನಲ್ಲಿ ಬರೆದುಕೊಂಡಿದ್ದಾರೆ.

ಇರಾನ್‌ನ ಜಾಗರೂಕತೆ ಮತ್ತು ಆಂತರಿಕ ವಿರೋಧ ಟ್ರಂಪ್ ನೀಡಿರುವ ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೇಯ್ ತಳ್ಳಿಹಾಕಿದ್ದಾರೆ. ನಾವು ಅಂತಿಮ ಹಂತದಲ್ಲಿದ್ದೇವೆ ಮತ್ತು ಎಂದಿಗೂ ಇಷ್ಟು ಹತ್ತಿರ ಬಂದಿರಲಿಲ್ಲ ನಿಜ. ಆದರೆ, ಇಂದೆ ಸಹಿ ಪ್ರಕ್ರಿಯೆ ನಡೆಯುವುದಿಲ್ಲ, ಮುಂದಿನ ದಿನಗಳಲ್ಲಿ ನಡೆಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲವೆಂದಿದ್ದಾರೆ.

ಮತ್ತೊಂದೆಡೆ, ಇರಾನ್‌ನ ಮಶ್ಹಾದ್ ನಗರದಲ್ಲಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ವಿರುದ್ಧ ತೀವ್ರ ಪ್ರತಿಭಟನೆಗಳು ನಡೆದಿವೆ. ಕಠಿಣ ನಿಲುವಿನ ಇರಾನಿ ನಾಯಕರು, ಈ ಒಪ್ಪಂದದಿಂದ ಇರಾನ್ ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತದೆ ಮತ್ತು ಅಮೆರಿಕಕ್ಕೆ ಶರಣಾಗುತ್ತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಯುಎಸ್-ಇರಾನ್ ಒಪ್ಪಂದದ ಪ್ರಮುಖ ಷರತ್ತುಗಳು ಅಮೇರಿಕಾ ನೀಡಲಿರುವ ವಿನಾಯಿತಿಗಳು ಇರಾನ್ ಪಾಲಿಸ ಬೇಕಾದ ನಿಯಮಗಳು ಆರ್ಥಿಕ ನಿರ್ಬಂಧಗಳ ಸಡಿಲಿಕೆ ಇರಾನ್ ಮೇಲಿನ ಕಠಿಣ ಆರ್ಥಿಕ ನಿರ್ಬಂಧಗಳನ್ನು ಅಮೇರಿಕಾ ಭಾಗಶಃ ಹಿಂಪಡೆಯಲಿದೆ. ಇರಾನ್ ಅಣ್ವಸ್ತ್ರಗಳನ್ನು ಅಭಿವೃದ್ಧಿ ಪಡಿಸುವುದಿಲ್ಲವೆಂದು ಲಿಖಿತವಾಗಿ ಒಪ್ಪಿಕೊಳ್ಳಬೇಕು. ನಿರ್ದಿಷ್ಟ ಮಿತಿಯಲ್ಲಿ ಇರಾನ್ ತನ್ನ ತೈಲ ಮತ್ತು ಪೆಟ್ರೋ ಕೆಮಿಕಲ್ ಉತ್ಪನ್ನಗಳನ್ನು ಅಂತರ್‌ರಾಷ್ಟ್ರೀಯ ಮಾರುಕಟ್ಟೆಗೆ ರಫ್ತು ಮಾಡಬಹುದು.

ಇರಾನ್ ತನ್ನಲ್ಲಿರುವ ಸಮೃದ್ಧ ಯುರೇನಿಯಂ ದಾಸ್ತಾನು ಮತ್ತು ಸಂಸ್ಕರಣೆಯನ್ನು ಸಂಪೂರ್ಣವಾಗಿ ಮಿತಿಗೊಳಿಸಬೇಕು. ಮುಟ್ಟುಗೋಲು ಹಾಕಿಕೊಂಡ ಹಣದ ಬಿಡುಗಡೆ ಜಾಗತಿಕ ಬ್ಯಾಂಕುಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ಇರಾನ್‌ನ 24 ಬಿಲಿಯನ್ ಡಾಲರ್ ಆಸ್ತಿಯನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುವುದು.

ಅಂತರ್‌ರಾಷ್ಟ್ರೀಯ ಹಡಗುಗಳಿಗೆ ಜಲಸಂಧಿಯಲ್ಲಿ ಉಚಿತ ಹಾಗೂ ಸುರಕ್ಷಿತ ಸಂಚಾರವನ್ನು ಇರಾನ್ ಖಾತರಿಪಡಿಸಬೇಕು. ಇರಾನ್ ಬಂದರುಗಳ ಮೇಲಿರುವ ಅಮೇರಿಕಾ ನೌಕಾಸೇನೆಯ ದಿಗ್ಬಂಧನವನ್ನು ಹಿಂಪಡೆಯಲಾಗುವುದು. ಮುಂದಿನ ಪೂರ್ಣ ಪ್ರಮಾಣದ ಮಾತುಕತೆಗೆ ಪೂರಕವಾಗಿ 60 ದಿನಗಳ ಕದನ ವಿರಾಮ ಪಾಲಿಸಬೇಕು.

ಯುದ್ಧದ ಕಹಿ ಹಿನ್ನೆಲೆ ಏನಾಗಿತ್ತು ಪ್ರಸಕ್ತ ವರ್ಷದ ಫೆಬ್ರವರಿ 28, 2026 ರಂದು ಅಮೇರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್‌ನ ಇಸ್ಲಾಮಿಕ್ ಗಣರಾಜ್ಯದ ನಾಯಕತ್ವ ಹಾಗೂ ಅಣ್ವಸ್ತ್ರ ನೆಲೆಗಳನ್ನು ಗುರಿಯಾಗಿಸಿ ಭೀಕರ ವೈಮಾನಿಕ ದಾಳಿ ನಡೆಸಿದ್ದವು. ಈ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ಧಾರ್ಮಿಕ ಮುಖಂಡ ಆಯತೊಲ್ಲಾ ಅಲಿ ಖಮೇನಿ ಮೃತಪಟ್ಟಿದ್ದರು.

ಇದರಿಂದ ಕ್ರುದ್ಧಗೊಂಡ ಇರಾನ್, ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾದ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿ ನೌಕೆಗಳ ಮೇಲೆ ಡ್ರೋನ್ ದಾಳಿ ನಡೆಸಿತ್ತು. ಇದು ಇಡೀ ವಿಶ್ವದಲ್ಲಿ ಇಂಧನ ದರ ಏರಿಕೆಗೆ ಕಾರಣವಾಗಿತ್ತು. ದಾಳಿಯಲ್ಲಿ ಮೂವರು ಭಾರತೀಯ ನಾವಿಕರು ಸಹ ಮೃತಪಟ್ಟಿದ್ದರು. ಇದೀಗ 5 ವಾರಗಳ ನಿರಂತರ ಕದನ ವಿರಾಮ ಹಾಗೂ ಪಾಕಿಸ್ತಾನದ ರಾಜತಾಂತ್ರಿಕ ಮಧ್ಯಸ್ಥಿಕೆಯ ನಂತರ ಉಭಯ ದೇಶಗಳು ಈ ಒಪ್ಪಂದದ ತೀರ್ಮಾನಕ್ಕೆ ಬಂದಿವೆ.

ಟ್ರಂಪ್ ಅವರು ಬಿ-2 ಬಾಂಬರ್ ವಿಮಾನಗಳ ಮೂಲಕ ಇರಾನ್‌ನ ಪರ್ವತಗಳ ಆಳದಲ್ಲಿ ಅಡಗಿಸಿಡಲಾಗಿರುವ ಅಣ್ವಸ್ತ್ರ ಧೂಳನ್ನು ಹೊರತೆಗೆದು ನಾಶಪಡಿಸುವುದಾಗಿ ಹೇಳಿರುವುದು ಜಾಗತಿಕ ರಕ್ಷಣಾ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಅಮೇರಿಕಾದೊಂದಿಗೆ ಶಾಂತಿ ಒಪ್ಪಂದ ಮಾಡಿಕೊಳ್ಳಲು ಮುಂದಾಗಿರುವ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ವಿರುದ್ಧ ಸ್ವದೇಶದಲ್ಲೇ ತೀವ್ರ ಜನಾಕ್ರೋಶ ವ್ಯಕ್ತವಾಗಿದೆ. ಇರಾನ್‌ನ ಪ್ರಮುಖ ನಗರವಾದ ಮಶಾದ್‌ನಲ್ಲಿರುವ ವಿದೇಶಾಂಗ ಸಚಿವಾಲಯದ ಕಚೇರಿ ಎದುರು ನೂರಾರು ಜನರು ಬೃಹತ್ ಪ್ರತಿಭಟನೆ ನಡೆಸಿದ್ದು, ಸಚಿವರ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನೂರಾರು ಮಹಿಳೆಯರು ಹಾಗೂ ನಾಗರಿಕರು, ದೇಶದ್ರೋಹಿ ಅರಾಗ್ಚಿಗೆ ಸಾವು ಬರಲಿ, ರಾಗ್ಚಿ ಒಬ್ಬ ರಾಜಿಪ್ರಿಯ ಹಾಗೂ ನುಸುಳುಕೋರವೆಂದು ಆಕ್ರೋಶ ಹೊರಹಾಕಿದ್ದಾರೆ. ಸಚಿವರು ಅಮೇರಿಕಾ ಎದುರು ಇರಾನ್ ದೇಶದ ಹಿತಾಸಕ್ತಿಗಳನ್ನು ಬಲಿಕೊಟ್ಟಿದ್ದಾರೆಂದು ಪ್ರತಿಭಟನಾಕಾರರು ಗಂಭೀರ ಆರೋಪ ಮಾಡಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK